# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

## ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ದಿನಾಂಕ:30.05.2023

# ದಾವಣಗೆರೆ ವಿಶ್ವವಿದ್ಯಾನಿಲಯ

**ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007**

ದೂರವಾಣಿ ಸಂಖ್ಯೆ: 08192–208029, ಫ್ಯಾಕ್ಸ್ ಸಂಖ್ಯೆ: 08192–208008


ಃ ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮಅಮೃತಂ ಃ

ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/03/2023–24/681 ದಿನಾಂಕ:05.06.2023

ಇವರಿಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಮಾನ್ಯರೆ,

**ವಿಷಯ : ದಿನಾಂಕ:30.05.2023 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.**

****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ – III ರ ಪ್ರಕರಣ 16 (i) ರ ರೀತ್ಯ ದಿನಾಂಕ:30.05.2023 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ–III ರ ಪ್ರಕರಣ 16(i)ರ ರೀತ್ಯ ನಡಾವಳಿ ತಲುಪಿದ ಏಳು ದಿನಗಳೊಳಗಾಗಿ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007.

**ಪ್ರತಿಗಳು:**

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು–560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು– 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಶೈಕ್ಷಣಿಕ/ಮಾಸನಿ/ಅಭಿವೃದ್ಧಿ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ–577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ–577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ–577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ–577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

## ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:30.05.2023ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

**ಸಭೆಯಲ್ಲಿ ಹಾಜರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ಬಿ.ಡಿ ಕುಂಬಾರ., ಮಾನ್ಯ ಕುಲಪತಿಗಳು. | : ಅಧ್ಯಕ್ಷರು |
| 2. | ಶ್ರೀ ಓಂ ಪ್ರಕಾಶ್ ರಾಜೋಳೆ, ಜಂಟಿ ನಿರ್ದೇಶಕರು | : ಸದಸ್ಯರು |
| 3. | ಕುಮಾರಿ ಗೀತಾ ಜಿ., ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು | : ಸದಸ್ಯರು |
| 4. | ಪ್ರೊ. ರಾಮಲಿಂಗಪ್ಪ, ಡೀನರು, ವಿಜ್ಞಾನ ನಿಕಾಯ | : ಸದಸ್ಯರು |
| 5. | ಪ್ರೊ. ಮಹಾಬಲೇಶ್ವರ್ ಯು.ಎಸ್., ಪ್ರಾಧ್ಯಾಪಕರು | : ಸದಸ್ಯರು |
| 6. | ಡಾ. ರವಿ ಟಿ.ಎಸ್., ಪ್ರಾಚಾರ್ಯರು | : ಸದಸ್ಯರು |
| 7. | ಡಾ. ನಾಗರಾಜ ಜಿ.ಯು., ಪ್ರಾಚಾರ್ಯರು | : ಸದಸ್ಯರು |
| 8. | ಡಾ. ದಾಸಯ್ಯ ಜಿ., ಪ್ರಾಚಾರ್ಯರು | : ಸದಸ್ಯರು |
| 9. | ಡಾ. ಪ್ರೇಮಾ ಪಿ.ಎಂ., ಪ್ರಾಚಾರ್ಯರು | : ಸದಸ್ಯರು |
| 10. | ಪ್ರೊ. ಶಿವಶಂಕರ್ ಕೆ., ಕುಲಸಚಿವರು (ಪರೀಕ್ಷಾಂಗ). | : ಸದಸ್ಯರು |
| 11. | ಪ್ರೊ. ಸರೋಜ ಬಿ.ಬಿ., ಕುಲಸಚಿವರು. | : ಸದಸ್ಯ ಕಾರ್ಯದರ್ಶಿ |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 8ಕ್ಕಿಂತ ಹೆಚ್ಚು ಅಂದರೆ 11 ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ನಂತರ, ನೂತನವಾಗಿ ಆಗಮಿಸಿದ ಶ್ರೀ ಓಂ ಪ್ರಕಾಶ್ ರಾಜೋಳೆ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಶಿವಮೊಗ್ಗ – ಇವರನ್ನು ಅಭಿನಂದಿಸಿ ಸ್ವಾಗತಿಸಿದರು. ತದನಂತರ, ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(a)/(05/23) |

**–:ಟಿಪ್ಪಣಿ:–**

**ವಿಷಯ: ದಿನಾಂಕ:24.02.2023 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ವಿಶೇಷ ಸಭಾ ನಡಾವಳಿಗಳ ದೃಢೀಕರಣ.**

*****

ದಿನಾಂಕ:24.02.2023 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ವಿಶೇಷ ಸಭಾ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಗಳು ಇದುವರೆಗೂ ವಿಶ್ವವಿದ್ಯಾನಿಲಯಕ್ಕೆ ಬಂದಿರುವುದಿಲ್ಲ. ಆದ್ದರಿಂದ, ಸದರಿ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:30.05.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ_ದೃಢೀಕರಣಕ್ಕಾಗಿ ಸಲ್ಲಿಸಿದೆ.

**ನಿರ್ಣಯ**

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:24.02.2023 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ದೃಢೀಕರಿಸಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(b)/(05/23) |

**-:ಟಿಪ್ಪಣಿ:-**

**ವಿಷಯ: ವಿಶ್ವವಿದ್ಯಾನಿಲಯದ ಸಿಂಡಿಕೇಟ್ ವತಿಯಿಂದ ಒಬ್ಬ ಸದಸ್ಯರನ್ನು ಹಣಕಾಸು ಸಮಿತಿ ಸಭೆಗೆ ನಾಮನಿರ್ದೇಶನ ಮಾಡಿರುವ ಕುರಿತು.**

*****

ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ – 2000 ಸೆಕ್ಷನ್ 32 (1) (V) ರನ್ವಯ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ವತಿಯಿಂದ **ಕುಮಾರಿ ಗೀತಾ ಜಿ, ಮಾನ್ಯ ಸಿಂಡಿಕೇಟ್ ಸದಸ್ಯರು** – ಇವರನ್ನು ದಿನಾಂಕ:03.03.2023 ರಿಂದ ಅನ್ವಯವಾಗುವಂತೆ ಸಿಂಡಿಕೇಟ್ ಸದಸ್ಯರಾಗಿ ಇರುವವರೆಗೆ ಅಥವಾ ಮುಂದಿನ ಆದೇಶದವರೆಗೆ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:30.05.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

**<u>ನಿರ್ಣಯ</u>**

ವಿಶ್ವವಿದ್ಯಾನಿಲಯದ ಸಿಂಡಿಕೇಟ್ ವತಿಯಿಂದ **ಕುಮಾರಿ ಗೀತಾ ಜಿ, ಮಾನ್ಯ ಸಿಂಡಿಕೇಟ್ ಸದಸ್ಯರು** – ಇವರನ್ನು ದಿನಾಂಕ:03.03.2023 ರಿಂದ ಅನ್ವಯವಾಗುವಂತೆ ಸಿಂಡಿಕೇಟ್ ಸದಸ್ಯರಾಗಿ ಇರುವವರೆಗೆ ಅಥವಾ ಮುಂದಿನ ಆದೇಶದವರೆಗೆ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿರುವುದನ್ನು ಘಟನೋತ್ತರವಾಗಿ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(c)/(05/23) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ ವತಿಯಿಂದ ಒಬ್ಬ ಸದಸ್ಯರನ್ನು ಹಣಕಾಸು ಸಮಿತಿ ಸಭೆಗೆ ನಾಮನಿರ್ದೇಶನ ಮಾಡಿರುವ ಬಗ್ಗೆ.**

*****

ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ – 2000 ಸೆಕ್ಷನ್ 32 (1) (VI) ರನ್ವಯ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ ವತಿಯಿಂದ **ಪ್ರೊ. ಗೋವಿಂದಪ್ಪ ಎಂ., ಪ್ರಾಧ್ಯಾಪಕರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ** – ಇವರನ್ನು ದಿನಾಂಕ:03.03.2023 ರಿಂದ ಅನ್ವಯವಾಗುವಂತೆ ವಿದ್ಯಾವಿಷಯಕ ಪರಿಷತ್ ಸದಸ್ಯರಾಗಿ ಇರುವವರೆಗೆ ಅಥವಾ ಮುಂದಿನ ಆದೇಶದವರೆಗೆ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:30.05.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ ವತಿಯಿಂದ **ಪ್ರೊ. ಗೋವಿಂದಪ್ಪ ಎಂ., ಪ್ರಾಧ್ಯಾಪಕರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ** – ಇವರನ್ನು ದಿನಾಂಕ:03.03.2023 ರಿಂದ ಅನ್ವಯವಾಗುವಂತೆ ವಿದ್ಯಾವಿಷಯಕ ಪರಿಷತ್ ಸದಸ್ಯರಾಗಿ ಇರುವವರೆಗೆ ಅಥವಾ ಮುಂದಿನ ಆದೇಶದವರೆಗೆ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿರುವುದನ್ನು ಘಟನೋತ್ತರವಾಗಿ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(a)/(05/23) |

## –:ಟಿಪ್ಪಣಿ:–

**ವಿಷಯ:** **ಪ್ರೊ. ಅನಿತಾ ಹೆಚ್.ಎಸ್., ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ – ಇವರಿಗೆ ಸಬಾಟಿಕಲ್ (Sabatical) ರಜೆ ಮಂಜೂರು ಮಾಡುವ ಬಗ್ಗೆ.**

**ಉಲ್ಲೇಖ:** 1. ಪ್ರೊ. ಅನಿತಾ ಹೆಚ್.ಎಸ್. ಇವರ ಮನವಿ ದಿನಾಂಕ:18.04.2023
2. ಮಾನ್ಯ ಕುಲಪತಿಗಳ ಆದೇಶ ದಿನಾಂಕ:15.04.2023
3. ವಿ.ವಿ.ಪತ್ರಸಂಖ್ಯೆ:ದಾವಿವಿ:ಮಾಸನಿ:586:2023-24/136 ದಿ:17.04.2023

*****

ಪ್ರೊ. ಅನಿತಾ ಹೆಚ್.ಎಸ್., ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರು ಶೈಕ್ಷಣಿಕ/ ಸಂಶೋಧನಾ ವಿಷಯಗಳನ್ನೊಳಗೊಂಡ ವಿವರವಾದ ಪುಸ್ತಕ ಬರೆಯಲು ದಿನಾಂಕ:15.05.2023 ರಿಂದ 14.05.2024 ರವರೆಗೆ ಸಬಾಟಿಕಲ್ ರಜೆಯನ್ನು ಮಂಜೂರು ಮಾಡುವಂತೆ ಉಲ್ಲೇಖ (1) ರ ಪತ್ರದಲ್ಲಿ ಕೋರಿರುತ್ತಾರೆ. ಈ ಕುರಿತು ಉಲ್ಲೇಖ (2) ರಲ್ಲಿ ಮಾನ್ಯ ಕುಲಪತಿಗಳು ರಾಜ್ಯದಲ್ಲಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ (Code of Conduct) 15-05-2023 ರವರೆಗೆ ಸಿಂಡಿಕೇಟ್ ಸಭೆ ಕರೆಯಲು ಅವಕಾಶ ಇಲ್ಲದೇ ಇರುವುದರಿಂದ ಸಬಾಟಿಕಲ್ ರಜೆ ಮಂಜೂರು ಮಾಡಲು ಅವಕಾಶ ಇರುವುದಿಲ್ಲವೆಂದು ಆದೇಶಿಸಿರುತ್ತಾರೆ.

ಈಗ ನೀತಿ ಸಂಹಿತೆ ಮುಕ್ತಾಯಗೊಂಡಿರುವುದರಿಂದ ಪ್ರೊ. ಅನಿತಾ ಹೆಚ್.ಎಸ್. ಇವರಿಗೆ ಯು.ಜಿ.ಸಿ. ನಿಯಮಾವಳಿಗಳನುಸಾರ ಒಂದು ವರ್ಷದ ಸಬಾಟಿಕಲ್ ರಜೆ ಮಂಜೂರು ಮಾಡುವ ಕುರಿತು ದಿನಾಂಕ:30.05.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ಪ್ರೊ. ಅನಿತಾ ಹೆಚ್. ಎಸ್. ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರಿಗೆ ಶೈಕ್ಷಣಿಕ/ ಸಂಶೋಧನಾ ವಿಷಯಗಳನ್ನೊಳಗೊಂಡ ವಿವರವಾದ ಪುಸ್ತಕ ಬರೆಯಲು ಯು.ಜಿ.ಸಿ. ನಿಯಮಾವಳಿಗಳನುಸಾರ ಸಬಾಟಿಕಲ್ ರಜೆ ಮಂಜೂರು ಮಾಡಲು ಸಭೆಯು ನಿರ್ಣಯಿಸಿ ಮುಂದಿನ ಕ್ರಮಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(b)/(05/23) |

**–:ಟಿಪ್ಪಣಿ:–**

**ವಿಷಯ: ಡಾ. ಯು. ಎಸ್. ಮಹಾಬಲೇಶ್ವರ್, ಪ್ರಾಧ್ಯಾಪಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ ಇವರಿಗೆ ಹಂಗೇರಿ ಹಾಗೂ ಇಟಲಿ ದೇಶಕ್ಕೆ ಹೋಗಿ ಬರಲು ಘಟನೋತ್ತರ ಅನುಮತಿ ನೀಡುವ ಕುರಿತು.**

**ಉಲ್ಲೇಖ:** 1. ಅಧ್ಯಕ್ಷರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ ಇವರ ಪತ್ರಸಂಖ್ಯೆ:ದಾವಿವಿ:ಗಅವಿ:2022–23/295 ದಿನಾಂಕ:06.05.2023.

2. ಮಾನ್ಯ ಕುಲಪತಿಗಳ ಆದೇಶ ದಿನಾಂಕ:02.05.2023.

*****

ಉಲ್ಲೇಖ (1)ರ ಪತ್ರದಲ್ಲಿ ಅಧ್ಯಕ್ಷರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ – ಇವರು ತಮ್ಮ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಡಾ. ಯು.ಎಸ್. ಮಹಾಬಲೇಶ್ವರ್ ಇವರಿಗೆ ಸಂಶೋಧನೆಗೆ ಸಂಬಂಧಿಸಿದಂತೆ **ದಿನಾಂಕ:08.05.2023 ರಿಂದ 20.05.2023** ರವರೆಗೆ ಹಂಗೇರಿ ಮತ್ತು ಇಟಲಿ ದೇಶಕ್ಕೆ ಹೋಗಿ ಬರಲು ಅನುಮತಿ ನೀಡುವಂತೆ ಕೋರಿರುತ್ತಾರೆ.

ಈ ಕುರಿತು ಉಲ್ಲೇಖ (2)ರ ಮಾನ್ಯ ಕುಲಪತಿಗಳ ಆದೇಶಾನುಸಾರ ಪ್ರೊ. ಯು.ಎಸ್. ಮಹಾಬಲೇಶ್ವರ್, ಪ್ರಾಧ್ಯಾಪಕರು ಇವರಿಗೆ **ದಿನಾಂಕ:08.05.2023 ರಿಂದ 20.05.2023 ರವರೆಗೆ ಹಂಗೇರಿ ಮತ್ತು ಇಟಲಿ ದೇಶಕ್ಕೆ** ಹೋಗಿಬರಲು ಅನುಮತಿ ನೀಡಲಾಗಿದೆ.

ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ನೀಡಿರುವ ಆದೇಶಕ್ಕೆ ದಿನಾಂಕ:30.05.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

## ನಿರ್ಣಯ

ಪ್ರೊ. ಯು.ಎಸ್. ಮಹಾಬಲೇಶ್ವರ್, ಪ್ರಾಧ್ಯಾಪಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ ಇವರು ಶೈಕ್ಷಣಿಕ ಉದ್ದೇಶಕ್ಕಾಗಿ ದಿನಾಂಕ:08.05.2023 ರಿಂದ 20.05.2023 ರವರೆಗೆ ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಹಣಕಾಸು/ ಆರ್ಥಿಕ ಹೊರೆ ಇಲ್ಲದೆ ಹಂಗೇರಿ ಮತ್ತು ಇಟಲಿ ದೇಶಕ್ಕೆ ಹೋಗಿ ಬಂದಿರುವುದಕ್ಕೆ ಘಟನೋತ್ತರವಾಗಿ ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(c)/(05/23) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರು/ ಸಂಯೋಜನಾಧಿಕಾರಿಗಳನ್ನು ನೇಮಕ ಮಾಡುವ ಕುರಿತು.**

*****

ಈ ಕೆಳಕಂಡ ಅಧ್ಯಯನ ವಿಭಾಗಗಳ ಅಧ್ಯಕ್ಷರು/ ಸಂಯೋಜನಾಧಿಕಾರಿಗಳ ಎರಡು ವರ್ಷಗಳ ಅವಧಿಯು ಮುಕ್ತಾಯಗೊಳ್ಳುತ್ತಿರುವುದರಿಂದ, ಸದರಿ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಕ್ಷರುಗಳ ಜೇಷ್ಠತೆಯ ಮೇರೆಗೆ ಅಧ್ಯಕ್ಷರು/ ಸಂಯೋಜನಾಧಿಕಾರಿಗಳನ್ನು ನೇಮಕ ಮಾಡುವ ಕುರಿತು ದಿನಾಂಕ:30.05.2023 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಸಲ್ಲಿಸಲಾಗಿದೆ.

| ಕ್ರ.ಸಂ. | ಹೆಸರು | ವಿಭಾಗ | ಅವಧಿ |
|---|---|---|---|
| 01 | ಡಾ. ಶಿವಲಿಂಗಪ್ಪ ಬಿ.ಪಿ. ಸಹ ಪ್ರಾಧ್ಯಾಪಕರು | ಸಮಾಜಕಾರ್ಯ | 01.07.2021 ರಿಂದ 30.06.2023 |
| 02 | ಡಾ. ಶಿವಕುಮಾರ ಕಣಸೋಗಿ, ಸಹ ಪ್ರಾಧ್ಯಾಪಕರು | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ | 15.06.2021 ರಿಂದ 14.06.2023 |
| 03 | ಡಾ. ಪ್ರಕಾಶ್ ಡಿ. ಜಿ, ಪ್ರಾಧ್ಯಾಪಕರು | ಗಣಿತಶಾಸ್ತ್ರ | 15.06.2021 ರಿಂದ 14.06.2023 |
| 04 | ಡಾ. ವೆಂಕಟೇಶ್ ಕೆ, ಸಹ ಪ್ರಾಧ್ಯಾಪಕರು | ಶಿಕ್ಷಣ | 15.06.2021 ರಿಂದ 14.06.2023 |
| 05 | ಡಾ. ರೇಣುಕ ಸಿ. ಕಾಪ್ಲೆ, ಸಹಾಯಕ ಪ್ರಾಧ್ಯಾಪಕರು | ಪ್ರಾಣಿಶಾಸ್ತ್ರ | 01.07.2021 ರಿಂದ 30.06.2023 |
| 06 | ಡಾ. ಕೊಟ್ರೇಶ್ ಡಿ, ಸಹ ಪ್ರಾಧ್ಯಾಪಕರು | ಸಸ್ಯಶಾಸ್ತ್ರ | 01.07.2021 ರಿಂದ 30.06.2023 |
| 07 | ಡಾ. ಸತೀಶ್ ಕುಮಾರ್ ಪಂಚಪ್ಪ, ಸಹಾಯಕ ಪ್ರಾಧ್ಯಾಪಕರು | ದೃಶ್ಯಕಲಾ ಮಹಾವಿದ್ಯಾಲಯ | 01.07.2021 ರಿಂದ 30.06.2023 |

## ನಿರ್ಣಯ

ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಅಧ್ಯಕ್ಷರು/ ಸಂಯೋಜನಾಧಿಕಾರಿಗಳನ್ನು ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಈ ಕೆಳಕಂಡಂತೆ ನೇಮಕ ಮಾಡಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

| ಕ್ರ.ಸಂ. | ಹೆಸರು | ವಿಭಾಗ | ಹುದ್ದೆ | ಅವಧಿ |
|---|---|---|---|---|
| 01 | ಪ್ರೊ. ಗೋವಿಂದಪ್ಪ ಎಂ. ಪ್ರಾಧ್ಯಾಪಕರು | ಸಸ್ಯಶಾಸ್ತ್ರ | ಅಧ್ಯಕ್ಷರು | 2 ವರ್ಷಗಳ ಅವಧಿಗೆ |
| 02 | ಪ್ರೊ. ಪ್ರಸನ್ನ ಕುಮಾರ್ ಬಿ.ಸಿ ಪ್ರಾಧ್ಯಾಪಕರು | ಗಣಿತಶಾಸ್ತ್ರ | ಅಧ್ಯಕ್ಷರು | |
| 03 | ಡಾ. ಶಿವಲಿಂಗಪ್ಪ ಬಿ.ಪಿ. ಸಹ ಪ್ರಾಧ್ಯಾಪಕರು | ಸಮಾಜಕಾರ್ಯ | ಅಧ್ಯಕ್ಷರು | ಮುಂದಿನ ಆದೇಶದವರೆಗೆ. |
| 04 | ಡಾ. ಶಿವಕುಮಾರ ಕಣಸೋಗಿ ಸಹ ಪ್ರಾಧ್ಯಾಪಕರು | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ | ಅಧ್ಯಕ್ಷರು | 2 ವರ್ಷಗಳ ಅವಧಿಗೆ |
| 05 | ಡಾ. ವೆಂಕಟೇಶ್ ಕೆ, ಸಹ ಪ್ರಾಧ್ಯಾಪಕರು | ಶಿಕ್ಷಣ | ಅಧ್ಯಕ್ಷರು | |
| 06 | ಡಾ. ಶೀನಿವಾಸ್ ಜಿ, ಸಹಾಯಕ ಪ್ರಾಧ್ಯಾಪಕರು | ಪ್ರಾಣಿಶಾಸ್ತ್ರ | ಸಂಯೋಜನಾಧಿಕಾರಿ | |
| 07 | ಡಾ. ಜಯರಾಜ್ ಎಂ. ಚಿಕ್ಕಪಾಟೀಲ್ ಸಹಾಯಕ ಪ್ರಾಧ್ಯಾಪಕರು | ದೃಶ್ಯಕಲಾ ಮಹಾವಿದ್ಯಾಲಯ | ಸ್ನಾತಕೋತ್ತರ ಪದವಿಗೆ ಸಂಯೋಜನಾಧಿಕಾರಿ | |
| 08 | ಡಾ. ಸತೀಶ್ ಕುಮಾರ್ ಪಂಚಪ್ಪ, ಸಹಾಯಕ ಪ್ರಾಧ್ಯಾಪಕರು | ದೃಶ್ಯಕಲಾ ಮಹಾವಿದ್ಯಾಲಯ | ಸ್ನಾತಕ ಪದವಿಗೆ ಪ್ರಭಾರೆ ಪ್ರಾಚಾರ್ಯರು | |

ಕುಲಸಚಿವರು | ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(d)/(05/23) |

**–ಃಟಿಪ್ಪಣಿಃ–**

**ವಿಷಯಃ ಗ್ರಂಥಾಲಯಗಳಿಗೆ 06 ಜನ ಗ್ರಂಥಾಲಯ ಸಹಾಯಕರನ್ನು ನೇಮಕ ಮಾಡುವ ಕುರಿತು.**

ಉಲ್ಲೇಖ: ಸಹಾಯಕ ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ ಇವರ ಪತ್ರಸಂಖ್ಯೆ:ದಾವಿವಿ:ಗ್ರ:2022–23/121 ದಿನಾಂಕ:02.05.2023

*****

ಉಲ್ಲೇಖ (1) ರ ಪತ್ರದಲ್ಲಿ ಸಹಾಯಕ ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರು – ವಿಶ್ವವಿದ್ಯಾನಿಲಯದ ಕೇಂದ್ರ ಗ್ರಂಥಾಲಯ, ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗ ಮತ್ತು ದೃಶ್ಯಕಲಾ ಮಹಾವಿದ್ಯಾಲಯ, ದಾವಣಗೆರೆ – ಇಲ್ಲಿನ ಗ್ರಂಥಾಲಯ ವಿಭಾಗಗಳಿಗೆ 06 ಜನ ಗ್ರಂಥಾಲಯ ಸಹಾಯಕರನ್ನು ನಿಗದಿತ ವೇತನವನ್ನು ನಿಗದಿಪಡಿಸಿ ನೇಮಕಾತಿ ಮಾಡಿಕೊಡುವಂತೆ ಕೋರಿರುತ್ತಾರೆ. ಈ ಕುರಿತು ದಿನಾಂಕ:30.05.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗೆ ಸಲ್ಲಿಸಿದೆ.

<u>ನಿರ್ಣಯ</u>

ವಿಶ್ವವಿದ್ಯಾನಿಲಯದ ಕೇಂದ್ರ ಗ್ರಂಥಾಲಯ, ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗ ಮತ್ತು ದೃಶ್ಯಕಲಾ ಮಹಾವಿದ್ಯಾಲಯ, ದಾವಣಗೆರೆ – ಇಲ್ಲಿನ ಗ್ರಂಥಾಲಯ ವಿಭಾಗಗಳಿಗೆ ತಲಾ ಇಬ್ಬರು ಗ್ರಂಥಾಲಯ ಸಹಾಯಕರಂತೆ ಒಟ್ಟು 06 ಜನ ಗ್ರಂಥಾಲಯ ಸಹಾಯಕರನ್ನು ನೇಮಕ ಮಾಡಿಕೊಳ್ಳಲು ಪತ್ರಿಕಾ ಪ್ರಕಟಣೆ ನೀಡಿ ನಂತರ ಸಮಿತಿ ರಚನೆ ಮಾಡಿ ಅಭ್ಯರ್ಥಿಗಳ ವಿದ್ಯಾರ್ಹತೆ ಮೇರೆಗೆ ಅತಿಥಿ ಉಪನ್ಯಾಸಕರಿಗೆ ನೀಡುವ ವೇತನದಂತೆ ಆಯ್ಕೆಯಾದ ಅಭ್ಯರ್ಥಿಗಳಿಗೆ ವೇತನ ನಿಗದಿ ಮಾಡಲು ಹಾಗೂ 06 ತಿಂಗಳಿಗೊಮ್ಮೆ ಒಂದು ದಿವಸ ಸೇವಾ ಭಂಗಗೊಳಿಸಿ ಮುಂದುವರೆಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(e)/(05/23) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಜಿ. ಆರ್. ಹಳ್ಳಿ, ಚಿತ್ರದುರ್ಗದ ಸಂಯೋಜನಾಧಿಕಾರಿಗಳನ್ನು ನೇಮಕ ಮಾಡುವ ಕುರಿತು.**

*****

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:25.01.2023 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ – ಡಾ. ವಿಶ್ವನಾಥ ಹೆಚ್., ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ ಇವರನ್ನು – ಸ್ನಾತಕೋತ್ತರ ಕೇಂದ್ರ, ಜಿ.ಆರ್.ಹಳ್ಳಿ, ಚಿತ್ರದುರ್ಗ ಇಲ್ಲಿನ ಸಂಯೋಜನಾಧಿಕಾರಿಯನ್ನಾಗಿ ಮೂರು ತಿಂಗಳ ಅವಧಿಯವರೆಗೆ ಮುಂದುವರೆಸಲಾಗಿತ್ತು. ಈಗ ಸದರಿ ಅವದಿಯು ಮುಕ್ತಾಯಗೊಂಡಿರುವುದರಿಂದ ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗದ ಸಂಯೋಜನಾಧಿಕಾರಿಗಳನ್ನು ನೇಮಕ ಮಾಡುವ ಸಂಬಂಧ ದಿನಾಂಕ:30.05.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ಡಾ. ವಿಶ್ವನಾಥ ಹೆಚ್., ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ ಇವರನ್ನು – ಸ್ನಾತಕೋತ್ತರ ಕೇಂದ್ರ, ಜಿ.ಆರ್.ಹಳ್ಳಿ, ಚಿತ್ರದುರ್ಗ ಇಲ್ಲಿನ ಸಂಯೋಜನಾಧಿಕಾರಿಯನ್ನಾಗಿ ಜೂನ್ 2023 ಅವಧಿಯವರೆಗೆ ಮುಂದುವರೆಸಲು ಹಾಗೂ ಡಾ. ಲೋಕೇಶ್ ಎಂ. ಯು. ಸಮಾಜಕಾರ್ಯ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ ಇವರನ್ನು ಜುಲೈ 01 2023 ರಿಂದ 02 ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಜಿ.ಆರ್.ಹಳ್ಳಿ, ಚಿತ್ರದುರ್ಗ ಇಲ್ಲಿನ ಸಂಯೋಜನಾಧಿಕಾರಿಯನ್ನಾಗಿ ನೇಮಕ ಮಾಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　　　　　ಕುಲಪತಿಗಳು

| ಮಾ.ಸ.ನಿ. ವಿಭಾಗ | |
| --- | --- |
| ವಿಷಯ ಸಂಖ್ಯೆ: | ಸಿಂ.02(f)/(05/23) |

## –ಃಟಿಪ್ಪಣಿಃ–

ಪ್ರಸ್ತಾವನೆ–1 ಖಾಲಿ ಇರುವ ಹಾಗೂ ಸರ್ಕಾರದಿಂದ ಅನುಮೋದನೆಗೊಂಡಂತಹ 06 ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ನೇರ ನೇಮಕಾತಿಗೆ ಅನುಮೋದನೆ ನೀಡುವ ಕುರಿತು.

ನಿರ್ಣಯ ಸದರಿ ವಿಷಯವನ್ನು ಮುಂದೂಡಲಾಯಿತು.

ಪ್ರಸ್ತಾವನೆ–2 ಖಾಲಿ ಇರುವ ಹಾಗೂ ಸರ್ಕಾರದಿಂದ ಅನುಮೋದನೆಗೊಂಡಂತಹ 02 ಕಛೇರಿ ಅಧೀಕ್ಷಕ ಹುದ್ದೆಗೆ ನೇರ ನೇಮಕಾತಿಗೆ ಅನುಮೋದನೆ ನೀಡುವ ಕುರಿತು.

ನಿರ್ಣಯ ಸದರಿ ವಿಷಯವನ್ನು ಮುಂದೂಡಲಾಯಿತು.

ಪ್ರಸ್ತಾವನೆ–3 ಖಾಲಿ ಇರುವ ಹಾಗೂ ಸರ್ಕಾರದಿಂದ ಅನುಮೋದನೆಗೊಂಡಂತಹ 02 ಸಹಾಯಕ ಕುಲಸಚಿವ ಹುದ್ದೆಗೆ ನೇರ ನೇಮಕಾತಿಗೆ ಅನುಮೋದನೆ ನೀಡುವ ಕುರಿತು.

ನಿರ್ಣಯ ಸದರಿ ವಿಷಯವನ್ನು ಮುಂದೂಡಲಾಯಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(g)/(05/23) |

## –:ಟಿಪ್ಪಣಿ:–

**ವಿಷಯ: ಶ್ರೀ ಆಂಜನೇಯ ಕೆ.ಹೆಚ್. ಹೊರಗುತ್ತಿಗೆ ನೌಕರರು – ಇವರಿಗೆ ತಾಂತ್ರಿಕ ಸಹಾಯಕ ಹುದ್ದೆ ನೀಡುವ ಕುರಿತು.**

*****

ಶ್ರೀ ಆಂಜನೇಯ ಕೆ. ಹೆಚ್. ಇವರು – ವಿಶ್ವವಿದ್ಯಾನಿಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಂಪ್ಯೂಟರ್ ಆಪರೇಟರ್ ಆಗಿ ಮಾನ್ಯ ಕುಲಸಚಿವರ ಆಪ್ತ ಕಾರ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದರ ಜೊತೆಗೆ ವಿಶ್ವವಿದ್ಯಾನಿಲಯದ ಟೆಂಡರ್‌ಗೆ ಸಂಬಂಧಪಟ್ಟ ತಾಂತ್ರಿಕ ಕಾರ್ಯಗಳನ್ನು ಹಾಗೂ ನೇಮಕಾತಿ ಘಟಕಕ್ಕೆ ಸಂಬಂಧಪಟ್ಟ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿರುವುದರಿಂದ ಸದರಿಯವರನ್ನು ತಾಂತ್ರಿಕ ಸಹಾಯಕ ಹುದ್ದೆಗೆ ನೇಮಕ ಮಾಡುವ ಸಂಬಂಧ ದಿನಾಂಕ:30.05.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ಈ ಹಿಂದೆ ಹೊರಗುತ್ತಿಗೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಸುಧಾಕರ್ ಹೆಚ್. ಆರ್., ತಾಂತ್ರಿಕ ಸಹಾಯಕ ಇವರ ತೆರವಾದ ಸ್ಥಾನಕ್ಕೆ – ಶ್ರೀ ಆಂಜನೇಯ ಕೆ. ಹೆಚ್. ಇವರು ನಿರ್ವಹಿಸುತ್ತಿರುವ ತಾಂತ್ರಿಕ ಕೆಲಸಕ್ಕೆ ಅನುಗುಣವಾಗಿ ಇವರನ್ನು ಹೊರಗುತ್ತಿಗೆ ಮೂಲಕ **ತಾಂತ್ರಿಕ ಸಹಾಯಕ ಹುದ್ದೆಗೆ** ನೇಮಕ ಮಾಡಿ ಮಾಸಿಕ ವೇತನ ರೂ. 20,000/– ಗಳನ್ನು ನಿಗದಿಪಡಿಸಲು ಸಭೆಯ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(a)/(05/23) |

## -:ಟಿಪ್ಪಣಿ:-

ವಿಷಯ: **2022-23ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಪ್ರವೇಶಾತಿ ರದ್ದುಪಡಿಸಿಕೊಂಡಿರುವ ವಿದ್ಯಾರ್ಥಿಗಳ ಪ್ರವೇಶ ಶುಲ್ಕ ಮರುಭರಿಕೆ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:20.04.2023

*******

ವಿಶ್ವವಿದ್ಯಾನಿಲಯದಲ್ಲಿ 2022-23ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸ್ನಾತಕೋತ್ತರ ಪದವಿಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ಕಾರಣಾಂತರಗಳಿಂದ ಪ್ರವೇಶಾತಿ ರದ್ದುಪಡಿಸಿಕೊಂಡು ಪಾವತಿಸಿರುವ ಪ್ರವೇಶ ಶುಲ್ಕವನ್ನು ಹಿಂಪಾವತಿಸುವಂತೆ ಕೋರಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಸದರಿ ವಿದ್ಯಾರ್ಥಿಗಳ ಮನವಿಗಳನ್ನು ಪರಿಶೀಲಿಸಿ ವಿಭಾಗವಾರು ಪಾವತಿಸಿರುವ ಶುಲ್ಕಗಳ ಸಂಪೂರ್ಣ ಮಾಹಿತಿಯನ್ನು ಅನುಬಂಧ-1 ರಲ್ಲಿ ನಮೂದಿಸಲಾಗಿದ್ದು, ಶುಲ್ಕ ಮರುಭರಿಕೆ ಮಾಡಬೇಕಾದ ಒಟ್ಟು **ಮೊತ್ತ ರೂ.3,14,034/-** ಗಳಾಗಿರುತ್ತದೆ.

ಮಾನ್ಯ ಕುಲಪತಿಯವರ ಆದೇಶದಂತೆ **ಒಟ್ಟು: 21 ವಿದ್ಯಾರ್ಥಿಗಳು** ಶುಲ್ಕ ಪಾವತಿ ಮಾಡಿರುವ ಮೊತ್ತದಲ್ಲಿ ಶೇಕಡಾ 10% ಮೊತ್ತವನ್ನು ಕಟಾವಣೆ ಮಾಡಿ ಉಳಿದ ಮೊತ್ತವನ್ನು ವಿದ್ಯಾರ್ಥಿಗಳಿಗೆ ಶುಲ್ಕ ಮರುಭರಿಕೆ ಮಾಡಿಕೊಡಲು ದಿನಾಂಕ:30.05.2023ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### ನಿರ್ಣಯ

2022-23ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸ್ನಾತಕೋತ್ತರ ಪದವಿಗಳಿಗೆ ಪ್ರವೇಶಾತಿ ಪಡೆದು ಕಾರಣಾಂತರಗಳಿಂದ ಪ್ರವೇಶಾತಿ ರದ್ದುಪಡಿಸಿಕೊಂಡಿರುವ ಒಟ್ಟು 21 ವಿದ್ಯಾರ್ಥಿಗಳು ಪಾವತಿಸಿರುವ ಪ್ರವೇಶ ಶುಲ್ಕದಲ್ಲಿ ಶೇಕಡಾ 10% ಮೊತ್ತವನ್ನು ಕಟಾವಣೆ ಮಾಡಿ ಉಳಿದ ಮೊತ್ತವನ್ನು ವಿದ್ಯಾರ್ಥಿಗಳ ಖಾತೆಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು. ಮುಂದುವರೆದು, ಮುಂದಿನ ಶೈಕ್ಷಣಿಕ ವರ್ಷದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ಒಮ್ಮೆ ಪಾವತಿಸಿದ ಪ್ರವೇಶ ಶುಲ್ಕಕ್ಕೆ ಸಂಬಂಧಿಸಿದಂತೆ ಶುಲ್ಕವನ್ನು ಮರುಪಾವತಿಸಲು ಅವಕಾಶವಿಲ್ಲ ಎಂಬುದರ ಕುರಿತು ವಿದ್ಯಾರ್ಥಿಗಳಿಂದ ಮುಚ್ಚಳಿಕೆ ಪತ್ರವನ್ನು ಪಡೆಯಲು ಸಭೆಯು ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಅಭಿವೃದ್ಧಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿ.04(a)/(05/23) |

# –:ಟಿಪ್ಪಣಿ:–

**ವಿಷಯ: ದರ ಒಪ್ಪಂದದಡಿ ಕೆಮಿಕಲ್ಸ್/ ಗ್ಲಾಸ್‌ವೇರ್/ ಸಣ್ಣ ಉಪಕರಣಗಳ ಖರೀದಿಗೆ ಸಂಬಂಧಪಟ್ಟಂತೆ Online ಟೆಂಡರ್‌ನಲ್ಲಿ ಆಯ್ಕೆಯಾಗಿರುವ ಸಂಸ್ಥೆಗಳಿಗೆ ಅನುಮೋದನೆ ನೀಡುವ ಕುರಿತು.**

*******

ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ವಿಜ್ಞಾನ ಮತ್ತು ತಂತ್ರಜ್ಞಾನದ ವಿವಿಧ ವಿಭಾಗಗಳಿಗೆ ಅವಶ್ಯಕವಾಗಿ ಬೇಕಾಗಿರುವ ಕೆಮಿಕಲ್ಸ್, ಗ್ಲಾಸ್‌ವೇರ್ ಹಾಗೂ ಸಣ್ಣ ಉಪಕರಣಗಳನ್ನು ಖರೀದಿಸಲು ಟೆಂಡರ್ ಆಹ್ವಾನಿಸಲಾಗಿದ್ದು, ಅದರಲ್ಲಿ ತಾಂತ್ರಿಕ ಬಿಡ್ ಹಾಗೂ ಹಣಕಾಸು ಬಿಡ್ ಸಮಿತಿಯಲ್ಲಿ ಈ ಕೆಳಕಂಡ ಕಂಪನಿಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಈ ಸಂಬಂಧ ದಿನಾಂಕ:30.05.2023ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

1. M/S Sampoorna Enterprises.
2. M/S Jain Sports & Scientific.
3. M/S Sylus Laboratory Products.

## ನಿರ್ಣಯ

ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ವಿಜ್ಞಾನ ಮತ್ತು ತಂತ್ರಜ್ಞಾನದ ವಿವಿಧ ವಿಭಾಗಗಳಿಗೆ ಅವಶ್ಯಕವಾಗಿ ಬೇಕಾಗಿರುವ ಕೆಮಿಕಲ್ಸ್, ಗ್ಲಾಸ್‌ವೇರ್ ಹಾಗೂ ಸಣ್ಣ ಉಪಕರಣಗಳನ್ನು ಖರೀದಿಸಲು ಟೆಂಡರ್ ಮತ್ತು ತಾಂತ್ರಿಕ ಬಿಡ್ ಹಾಗೂ ಹಣಕಾಸು ಬಿಡ್ ಸಮಿತಿಯಲ್ಲಿ ಆಯ್ಕೆಯಾಗಿರುವ 1) M/S Sampoorna Enterprises. 2) M/S Jain Sports & Scientific. 3) M/S Sylus Laboratory Products. ಕಂಪನಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಅಭಿವೃದ್ಧಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.04(b)/(05/23) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದರ ಒಪ್ಪಂದದಡಿ ಔಷಧಿ/ ಚುಚ್ಚುಮದ್ದುಗಳನ್ನು ಖರೀದಿಸಲು ಟೆಂಡರ್‌ನಲ್ಲಿ ಆಯ್ಕೆಯಾಗಿರುವ ಸಂಸ್ಥೆಗೆ ಅನುಮೋದನೆ ನೀಡುವ ಕುರಿತು.**

*******

ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಅವಶ್ಯಕವಾಗಿ ಬೇಕಾಗಿರುವ ಔಷಧಿ / ಚುಚ್ಚುಮದ್ದುಗಳನ್ನು ಖರೀದಿಸಲು ಟೆಂಡರ್ ಆಹ್ವಾನಿಸಲಾಗಿದ್ದು, ಅದರಲ್ಲಿ ತಾಂತ್ರಿಕ ಬಿಡ್ ಹಾಗೂ ಹಣಕಾಸು ಬಿಡ್ ಸಮಿತಿಯಲ್ಲಿ **M/S Apollo Plus Medical & General Store** ಇವರನ್ನು ಆಯ್ಕೆ ಮಾಡಲಾಗಿರುತ್ತದೆ. ಈ ಸಂಬಂಧ ದಿನಾಂಕ:30.05.2023ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಅವಶ್ಯಕವಾಗಿ ಬೇಕಾಗಿರುವ ಔಷಧಿ / ಚುಚ್ಚುಮದ್ದುಗಳನ್ನು ಖರೀದಿಸಲು ಟೆಂಡರ್ ಮತ್ತು ತಾಂತ್ರಿಕ ಬಿಡ್ ಹಾಗೂ ಹಣಕಾಸು ಬಿಡ್ ಸಮಿತಿಯಲ್ಲಿ ಆಯ್ಕೆಯಾಗಿರುವ **M/S Apollo Plus Medical & General Store.** ಕಂಪನಿಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಅಭಿವೃದ್ಧಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.04(c)/(05/23) |

# –:ಟಿಪ್ಪಣಿ:–

**ವಿಷಯ:** **ರಾಜ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಗತ್ಯವಿರುವ ಪೀಠೋಪಕರಣಗಳನ್ನು ಖರೀದಿಸುವ ಕುರಿತು.**

ಉಲ್ಲೇಖ: ಅಧ್ಯಕ್ಷರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ ಇವರ ಪತ್ರಸಂಖ್ಯೆ: ದಾವಿವಿ:ರಾಜ್ಯಶಾಸ್ತ್ರ:183:2022–23 ದಿ:23.05.2023.

*******

ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಕಾರ್ಯಾಲಯ ಹಾಗೂ ಅಧ್ಯಾಪಕರುಗಳಿಗೆ ಈ ಕೆಳಕಂಡ ಪೀಠೋಪಕರಣ/ ಯಂತ್ರೋಪಕರಣಗಳ ಅವಶ್ಯಕತೆ ಇರುವುದರಿಂದ ಸದರಿ ಪೀಠೋಪಕರಣ/ ಯಂತ್ರೋಪಕರಣಗಳನ್ನು ಒದಗಿಸಿಕೊಡುವಂತೆ ಅಧ್ಯಕ್ಷರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ ಇವರು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ. ಆದ್ದರಿಂದ ಸದರಿ ಪೀಠೋಪಕರಣ/ ಯಂತ್ರೋಪಕರಗಳನ್ನು ಖರೀದಿಸುವ ಸಲುವಾಗಿ ದಿನಾಂಕ:30.05.2023ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

| Sl.No. | Particulars | Quantity |
|---|---|---|
| 1. | Computer system (for office) | 01 |
| 2. | Cushion Chair for Chairman room | 06 |
| 3. | Faculty Executive Chair | 03 |
| 4. | Long wooden meeting table (3x8) | 01 |
| 5. | Wooden table (4 x 2) | 01 |

## ನಿರ್ಣಯ

ರಾಜ್ಯಶಾಸ್ತ್ರ ಮತ್ತು ರಸಾಯನಶಾಸ್ತ್ರ ಅಧ್ಯಯನ ವಿಭಾಗಗಳಿಗೆ ಅವಶ್ಯವಿರುವ ಈ ಮೇಲ್ಕಂಡ ಪೀಠೋಪಕರಣ/ ಯಂತ್ರೋಪಕರಣಗಳನ್ನು ಖರೀದಿಸಲು ಸಭೆಯು ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(a)(05/23) |

**–:ಟಿಪ್ಪಣಿ:–**

**ವಿಷಯ: ದಿನಾಂಕ:09.03.2023 ರಂದು ನಡೆದ ವಿಶ್ವವಿದ್ಯಾನಿಲಯದ 2022–23ನೇ ಸಾಲಿನ ಮೂರನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು.**

**ಉಲ್ಲೇಖ:** 1. ಮೂರನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ದಿನಾಂಕ:09.03.2023.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:24.03.2023.

****

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:09.03.2023 ರಂದು ಆನ್‌ಲೈನ್/ಆಫ್‌ಲೈನ್ ಮೂಲಕ ಜರುಗಿದ ವಿಶ್ವವಿದ್ಯಾನಿಲಯದ 2022–23ನೇ ಸಾಲಿನ ಮೂರನೇ ಹಣಕಾಸು ಸಮಿತಿ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯಗಳ ನಡಾವಳಿಗಳನ್ನು ದಿನಾಂಕ:30.05.2023ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

<u>ನಿರ್ಣಯ</u>

ದಿನಾಂಕ:09.03.2023 ರಂದು ಆನ್‌ಲೈನ್/ ಆಫ್‌ಲೈನ್ ಮೂಲಕ ಜರುಗಿದ ವಿಶ್ವವಿದ್ಯಾನಿಲಯದ 2022–23ನೇ ಸಾಲಿನ **ಮೂರನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳ** ಕುರಿತು ಚರ್ಚಿಸಿ ನಂತರ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(b)(05/23) |

## –ಃಟಿಪ್ಪಣಿಃ–

**ವಿಷಯಃ ದಿನಾಂಕ:28.03.2023 ರಂದು ನಡೆದ ವಿಶ್ವವಿದ್ಯಾನಿಲಯದ 2022–23ನೇ ಸಾಲಿನ ನಾಲ್ಕನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು.**

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:17.04.2023.

*****

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು – ಇಲ್ಲಿ ದಿನಾಂಕ:28.03.2023 ರಂದು ಜರುಗಿದ ವಿಶ್ವವಿದ್ಯಾನಿಲಯದ 2022–23ನೇ ಸಾಲಿನ ನಾಲ್ಕನೇ ಹಣಕಾಸು ಸಮಿತಿ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯಗಳ ನಡಾವಳಿಗಳನ್ನು ದಿನಾಂಕ:30.05.2023ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ**

ದಿನಾಂಕ:28.03.2023 ರಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರಿನಲ್ಲಿ ಜರುಗಿದ ವಿಶ್ವವಿದ್ಯಾನಿಲಯದ 2022–23 ನೇ ಸಾಲಿನ **ನಾಲ್ಕನೇ ಹಣಕಾಸು ಸಮಿತಿ** ಸಭೆಯ ನಡಾವಳಿಗಳ ಕುರಿತು ಚರ್ಚಿಸಿ ನಂತರ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(c)(05/23) |

# –:ಟಿಪ್ಪಣಿ:–

**ವಿಷಯಃ ವಿಶ್ವವಿದ್ಯಾನಿಲಯದ 2023–24ನೇ ಆರ್ಥಿಕ ವರ್ಷದ ಆಯವ್ಯಯ ಅಂದಾಜುಗಳ ಅನುಮೋದನೆ ಕುರಿತು.**

**ಉಲ್ಲೇಖ** 1. ಹಣಕಾಸು ಸಮಿತಿ ಸಭೆಯ ಅನುಮೋದನೆ ದಿನಾಂಕ:28.03.2023.

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:17.04.2023.

*****

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಸೆಕ್ಷನ್ (48) ರನ್ವಯ ದಾವಣಗೆರೆ ವಿಶ್ವವಿದ್ಯಾನಿಲಯದ 2023–24ನೇ ಆರ್ಥಿಕ ವರ್ಷದ ಆಂತರಿಕ ಆಯವ್ಯಯ ಅಂದಾಜು ಪತ್ರಗಳ ಕರಡನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಆಯವ್ಯಯದ ಕರಡು ಪ್ರತಿಯನ್ನು ದಿನಾಂಕ:30.05.2023ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

## ನಿರ್ಣಯ

2023–24ನೇ ಆರ್ಥಿಕ ವರ್ಷದ ಆಂತರಿಕ ಆಯವ್ಯಯ ಅಂದಾಜು ಕುರಿತು ಸುದೀರ್ಘ ಚರ್ಚೆಯ ನಂತರ ಕರಡು ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(d)(05/23) |

## -:ಟಿಪ್ಪಣಿ:-

**ವಿಷಯ:** **2011-2012ನೇ ಸಾಲಿನಿಂದ 2019-2020ನೇ ಸಾಲಿನವರೆಗೆ ಲೆಕ್ಕ ಪರಿಶೋಧನಾ ವರದಿಯಲ್ಲಿನ ಆಕ್ಷೇಪಣೆ/ ವಸೂಲಾತಿ ಕಂಡಿಕೆಗಳ ಅನುಸರಣಾ ವರದಿಯನ್ನು ಅಡ್‌ಹಾಕ್ ಸಮಿತಿ ಸಭೆಯಲ್ಲಿ ಮಂಡಿಸಿ ತೀರುವಳಿಗೆ ಕ್ರಮಕೈಗೊಳ್ಳಲು ಅಡ್‌ಹಾಕ್ ಸಮಿತಿ ಸಭೆ ಏರ್ಪಡಿಸಲು ಅನುಮೋದನೆ ನೀಡುವ ಕುರಿತು..**

**ಉಲ್ಲೇಖ** ಪತ್ರ ಸಂ.:ರಾಲೆಪ/ಲೆಪವಿ-03/24/ಇತರೆ/2021-22/80 ದಿನಾಂಕ:10.04.2023

*****

ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ವಿಶ್ವವಿದ್ಯಾನಿಲಯದ ಲೆಕ್ಕ ಪರಿಶೋಧನಾ ವರದಿಯಲ್ಲಿನ ಆಕ್ಷೇಪಣೆ/ವಸೂಲಾತಿ ಕಂಡಿಕೆಗಳಿಗೆ ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಅಡ್‌ಹಾಕ್ ಸಮಿತಿ ಸಭೆ ಏರ್ಪಡಿಸಿ ತೀರುವಳಿಗೆ ಕ್ರಮಕೈಗೊಳ್ಳಲು ಸೂಚಿಸಲಾಗಿದೆ. ಆದುದರಿಂದ, ವಿಶ್ವವಿದ್ಯಾನಿಲಯದ 2011-2012ನೇ ಸಾಲಿನಿಂದ 2019-2020ನೇ ಸಾಲಿನವರೆಗೆ ಲೆಕ್ಕ ಪರಿಶೋಧನಾ ವರದಿಯಲ್ಲಿನ ಆಕ್ಷೇಪಣೆ/ವಸೂಲಾತಿ ಕಂಡಿಕೆಗಳಿಗೆ ಅನುಸರಣಾ ವರದಿ ಸಿದ್ಧಪಡಿಸಲಾಗಿದ್ದು, ಅಡ್‌ಹಾಕ್ ಸಮಿತಿ ಸಭೆಯಲ್ಲಿ ಮಂಡಿಸಿ ತೀರುವಳಿಗೆ ಕ್ರಮಗೊಳ್ಳುವ ಸಲುವಾಗಿ ದಿನಾಂಕ:30.05.2023ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

## ನಿರ್ಣಯ

2011-2012ನೇ ಸಾಲಿನಿಂದ 2019-2020ನೇ ಸಾಲಿನವರೆಗೆ ಲೆಕ್ಕ ಪರಿಶೋಧನಾ ವರದಿಯಲ್ಲಿನ ಆಕ್ಷೇಪಣೆ/ ವಸೂಲಾತಿ ಕಂಡಿಕೆಗಳಿಗೆ ಅನುಸರಣಾ ವರದಿ ಸಿದ್ಧಪಡಿಸಿ ಅಡ್‌ಹಾಕ್ ಸಮಿತಿ ಸಭೆಯನ್ನು ಜೂನ್ 2023ರ ಮಾಹೆಯಲ್ಲಿ ಏರ್ಪಡಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(a)(05/23) |

## -:ಟಿಪ್ಪಣಿ:-

**ವಿಷಯ: ಸೈದ್ಧಾಂತಿಕ ಪರೀಕ್ಷೆಯಲ್ಲಿ ಕಾರ್ಯನಿರ್ವಹಿಸಲು ಸಿಬ್ಬಂದಿಗಳನ್ನು ನಿಗದಿಪಡಿಸುವ ಬಗ್ಗೆ.**

*****

ವಿಶ್ವವಿದ್ಯಾನಿಲಯದ ಆದೇಶಾದಾನುಸಾರ ಸೈದ್ಧಾಂತಿಕ ಪರೀಕ್ಷಾ ಕಾರ್ಯಗಳಿಗೆ ಈ ಕೆಳಗಿನಂತೆ ಸಿಬ್ಬಂದಿಗಳನ್ನು ನಿಗದಿಪಡಿಸಲಾಗಿರುತ್ತದೆ. ಆದರೆ ಇತ್ತೀಚಿನ ಬಿಲ್ಲುಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಒಂದು/ಎರಡು ರೀಪಿಟರ್ಸ್ ವಿದ್ಯಾರ್ಥಿಗಳ ಸೈದ್ಧಾಂತಿಕ ಪರೀಕ್ಷಾ ಬಿಲ್ಲುಗಳನ್ನು ಪ್ರತ್ಯೇಕವಾಗಿ ಸಲ್ಲಿಸುತ್ತಿದ್ದಾರೆ. ಇದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕವಾಗಿ ನಷ್ಟವುಂಟಾಗುತ್ತದೆ. ಆದ್ದರಿಂದ ಕನಿಷ್ಟ ರೀಪಿಟರ್ಸ್ 10 ವಿದ್ಯಾರ್ಥಿಗಳು ಇದ್ದಲ್ಲಿ ರೆಗ್ಯೂಲರ್ ವಿದ್ಯಾರ್ಥಿಗಳೊಂದಿಗೆ ರೀಪಿಟರ್ಸ್ ವಿದ್ಯಾರ್ಥಿಗಳನ್ನು ಸೇರಿಸಿ ಬಿಲ್ಲುಗಳನ್ನು ಸಿದ್ಧಪಡಿಸಿದಲ್ಲಿ ಅನಗತ್ಯವಾಗಿ ಹೆಚ್ಚುವರಿ ಸಿಬ್ಬಂದಿಗಳ ಅಗತ್ಯತೆ ಇರುವುದಿಲ್ಲ. ಆದ್ದರಿಂದ ರೀಪಿಟರ್ಸ್ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದಾಗ ಕಛೇರಿ ಅಧೀಕ್ಷಕರು/ ಕ್ಲರ್ಕ್/ ಅಟೆಂಡರ್/ ಜವಾನ/ ಸಹಾಯಕ ಸಿಬ್ಬಂದಿಗಳನ್ನು ನಿಗದಿ ಮಾಡುವ ಸಂಬಂಧ ದಿನಾಂಕ:30.05.2023ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ಸೈದ್ಧಾಂತಿಕ ಪರೀಕ್ಷಾ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಈ ಕೆಳಕಂಡಂತೆ ನಿಯೋಜನೆ ಮಾಡಲು ಹಾಗೂ ಭತ್ಯೆಯನ್ನು ಪರಿಷ್ಕರಿಸಿ ನೀಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

**Examination-Instructions to pass the bills.**

| ಕ್ರ ಸಂ. | ಪರೀಕ್ಷಾ ಸಿಬ್ಬಂದಿ/ಅಧಿಕಾರಿ | ದಾವಣಗೆರೆ ವಿಶ್ವವಿದ್ಯಾನಿಲಯದ ಪ್ರಸ್ತುತ ದರ | ದಾವಣಗೆರೆ ವಿಶ್ವವಿದ್ಯಾನಿಲಯದ ಪರಿಷ್ಕೃತ ದರ |
|---|---|---|---|
| 01 | ಮುಖ್ಯ ಅಧೀಕ್ಷಕರು | • ರೂ.3,000/- (ಸ್ನಾತಕ) | • ರೂ.3,000/- (ಸ್ನಾತಕ) |
| | | • ರೂ.4,000/-(ಸ್ನಾತಕೋತ್ತರ) ಪೂರ್ಣ ಪರೀಕ್ಷೆಗೆ. | • ರೂ.4,000/- (ಸ್ನಾತಕೋತ್ತರ) |
| 02 | ಕಛೇರಿ ಅಧೀಕ್ಷಕರು | • ರೂ.200/- ಪ್ರತಿ ಸೇಷನ್‌ಗೆ (ಸ್ನಾತಕ) | • ರೂ.200/- ಪ್ರತಿ ದಿನಕ್ಕೆ (ಸ್ನಾತಕ) |
| | | • 001-150 ವಿದ್ಯಾರ್ಥಿಗಳಿಗೆ - 01 OS | • 001-300 ವಿದ್ಯಾರ್ಥಿಗಳಿಗೆ - 01<br>• 301 ರಿಂದ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ - 02 |
| | | • 151-800 ವಿದ್ಯಾರ್ಥಿಗಳಿಗೆ - 02 OS | |
| | | • 801 ರ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ-03 OS | |
| 03 | ಹೆಡ್ ಕ್ಲರ್ಕ್ | • ರೂ.150/- ಪ್ರತಿ ಸೇಷನ್‌ಗೆ (ಸ್ನಾತಕ) | ರದ್ದುಪಡಿಸಲಾಗಿದೆ. |
| 04 | ಕ್ಲರ್ಕ್ ಮತ್ತು ಡಾಟ ಎಂಟ್ರಿ ಆಪರೇಟರ್ | • ರೂ.100/- ಪ್ರತಿ ಸೇಷನ್‌ಗೆ (ಸ್ನಾತಕ) | • ರೂ.150/- ಪ್ರತಿ ದಿನಕ್ಕೆ (ಸ್ನಾತಕ) |
| | | • 001-100 ವಿದ್ಯಾರ್ಥಿಗಳಿಗೆ ಕ್ಲರ್ಕ್-1, ಡಾಟ ಎಂಟ್ರಿ ಆಪರೇಟರ್ - 01<br>• 101-300 ವಿದ್ಯಾರ್ಥಿಗಳಿಗೆ ಕ್ಲರ್ಕ್-02, ಡಾಟ ಎಂಟ್ರಿ ಆಪರೇಟರ್ - 01<br>• 301-500 ವಿದ್ಯಾರ್ಥಿಗಳಿಗೆ ಕ್ಲರ್ಕ್-03, ಡಾಟ ಎಂಟ್ರಿ ಆಪರೇಟರ್ - 02 | • 001-300 ವಿದ್ಯಾರ್ಥಿಗಳಿಗೆ ಕ್ಲರ್ಕ್-01, ಡಾಟ ಎಂಟ್ರಿ ಆಪರೇಟರ್ - 01<br>• 301-ರಿಂದ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಕ್ಲರ್ಕ್-02, ಡಾಟ ಎಂಟ್ರಿ ಆಪರೇಟರ್- 02 |

ಕುಲಸಚಿವರು

ಕುಲಪತಿಗಳು

| | | | |
|---|---|---|---|
| 05 | ಬೆರಳಚ್ಚುಗಾರರು | --------- | ರದ್ದುಪಡಿಸಲಾಗಿದೆ. |
| 6 | ಅಟೆಂಡರ್ | • 02 ಕೊಠಡಿಗೆ ಒಬ್ಬ ಅಟೆಂಡರ್ ಮಾತ್ರ.<br>• ಕಛೇರಿಗೆ ಒಬ್ಬ ಅಟೆಂಡರ್ ಮಾತ್ರ. | • ರೂ.100/- ಪ್ರತಿ ದಿನಕ್ಕೆ (ಸ್ನಾತಕ)<br>• 01 ರಿಂದ 300 ವಿದ್ಯಾರ್ಥಿಗಳಿಗೆ ಅಟೆಂಡರ್-01<br>• 301 ರಿಂದ 600 ವಿದ್ಯಾರ್ಥಿಗಳಿಗೆ ಅಟೆಂಡರ್-02<br>• 601 ರಿಂದ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಅಟೆಂಡರ್ - 03 |
| 07 | ಸೇವಕ ಹೆಚ್ಚುವರಿ | --------- | --------- |
| 08 | ಕೊಠಡಿ ಮೇಲ್ವಿಚಾರಕರು | • ಕಡ್ಡಾಯವಾಗಿ ಎಲ್ಲಾ ಯು.ಜಿ.ಸಿ. ಅಧ್ಯಾಪಕರುಗಳನ್ನು ನೇಮಕ ಮಾಡಿಕೊಳ್ಳಬೇಕು. (ಕೊರತೆ ಬಿದ್ದಲ್ಲಿ ಮಾತ್ರ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಬೇಕು.)<br>• ರೂ.200/- ಪ್ರತಿ ಸೇಷನ್‌ಗೆ (ಯು.ಜಿ & ಪಿ.ಜಿ) | • ಕಡ್ಡಾಯವಾಗಿ ಎಲ್ಲಾ ಯು.ಜಿ.ಸಿ.ಅಧ್ಯಾಪಕರುಗಳನ್ನು ನೇಮಕ ಮಾಡಿಕೊಳ್ಳಬೇಕು. (ಕೊರತೆ ಬಿದ್ದಲ್ಲಿ ಮಾತ್ರ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಬೇಕು.)<br>• ರೂ.200/- ಪ್ರತಿ ಸೇಷನ್‌ಗೆ(ಯು.ಜಿ & ಪಿ.ಜಿ) |
| 09 | ಉತ್ತರ ಪತ್ರಿಕೆಗಳ ಕೋಡಿಂಗ್ ಕಾರ್ಯಕ್ಕೆ ಸಂಭಾವನೆ. | • ರೂ.4-00 (01 ಪ್ಯಾಕೇಟ್‌ನಲ್ಲಿ 20 ಉತ್ತರ ಪತ್ರಿಕೆಗಳು) | • ರೂ.4-50 ಪೈಸೆ (01 ಪ್ಯಾಕೇಟ್‌ನಲ್ಲಿ 20 ಉತ್ತರ ಪತ್ರಿಕೆಗಳು) |
| 10 | ಉತ್ತರ ಪತ್ರಿಕೆಗಳ ಸಂಗ್ರಹಣೆ, ವಿಷಯವಾರು ಜೋಡಿಸುವುದು, ಕೋಡಿಂಗ್/ಮೌಲ್ಯಮಾಪನ ಕೇಂದ್ರಕ್ಕೆ ಸರಬರಾಜು ಮಾಡುವ ಕಾರ್ಯಕ್ಕೆ ಸಂಭಾವನೆ. | • ರೂ.0.30 ಪೈಸೆ ಅಟೆಂಡರ್/ ಡ್ರೈವರ್/ ಜವಾನ)<br>• ರೂ. 0.15 ಪೈಸೆ (ಮೇಲ್ವಿಚಾರಕರು/ ಮೆ. ಸಿಬ್ಬಂದಿ) | • ರೂ.0.40 ಪೈಸೆ (ಅಟೆಂಡರ್/ಡ್ರೈವರ್/ಜವಾನ)<br>• ರೂ.0.20 ಪೈಸೆ(ಮೇಲ್ವಿಚಾರಕರು/ಮೆ. ಸಿಬ್ಬಂದಿ) |
| 11 | ಮೌಲ್ಯಮಾಪನ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುವ ಅಧ್ಯಾಪಕರು/ಅಧ್ಯಾಪಕೇತರ ಸಿಬ್ಬಂದಿಗಳ ದಿನಭತ್ಯೆ/ ಸಂಭಾವನೆ (ದಿನಕ್ಕೆ). | • ಕೋ-ಆರ್ಡಿನೇಟರ್: ರೂ.500+ರೂ.500=ರೂ.1000/-<br>• ಸಹ. ಕೋ-ಆರ್ಡಿನೇಟರ್: ರೂ.400+ರೂ.400=ರೂ.800/- | • ಕೋ-ಆರ್ಡಿನೇಟರ್: ಸ್ಥಳೀಯ ಭತ್ಯೆ+ ಸಂಭಾವನೆ ರೂ.500+ರೂ.500=ರೂ.1000/- 30 ದಿನಗಳಿಗೆ ಮೀರದಂತೆ (ಯು.ಜಿ & ಪಿ.ಜಿ)<br>• ಸಹ ಕೋ.ಆರ್ಡಿನೇಟರ್ ಸ್ಥಳೀಯ ಭತ್ಯೆ+ಸಂಭಾವನೆ ರೂ.400+ರೂ.400=ರೂ.800/- 30 ದಿನಗಳಿಗೆ ಮೀರದಂತೆ (ಯು.ಜಿ & ಪಿ.ಜಿ)<br>(ರಜೆ ದಿನಗಳಲ್ಲಿ ಪರೀಕ್ಷಾ ಕಾರ್ಯ ನಿರ್ವಹಿಸಿದಲ್ಲಿ ಮಾತ್ರ ಸಂಭಾವನೆ ಕ್ಲೈಮ್ ಮಾಡಿಕೊಳ್ಳಬೇಕು. ಇಲ್ಲದಿದ್ದಲ್ಲಿ ಸ್ಥಳೀಯ ಭತ್ಯೆ ಮಾತ್ರ ಅನ್ವಯಿಸುತ್ತದೆ) |
| | | • ಕಛೇರಿ ಅಧೀಕ್ಷಕರು: ರೂ.250+ರೂ.250=ರೂ.500/- (ಬಿಲ್ಲುಗಳನ್ನು ಪರಿಶೀಲಿಸುವುದು ಹಾಗೂ ಇತರೆ ಕಾರ್ಯ) | • ಕಛೇರಿ ಅಧೀಕ್ಷಕರು: ಸ್ಥಳೀಯ ಭತ್ಯೆ ರೂ.250/- 30 ದಿನಗಳಿಗೆ ಮೀರದಂತೆ (ಯು.ಜಿ & ಪಿ.ಜಿ) |
| | | • ಕ್ಲರ್ಕ್: ರೂ.150+ರೂ.150=ರೂ.300/- (ಬಿಲ್ಲುಗಳನ್ನು ಸಿದ್ದಪಡಿಸುವುದು ಹಾಗೂ ಇತರೆ ಕಾರ್ಯ) | • ಕ್ಲರ್ಕ್: ಸ್ಥಳೀಯ ಭತ್ಯೆ ರೂ.150/- 30 ದಿನಗಳಿಗೆ ಮೀರದಂತೆ (ಯು.ಜಿ & ಪಿ.ಜಿ) |
| | | • ಅಟೆಂಡರ್: ರೂ.100+ರೂ.100=ರೂ.200/- | ಅಟೆಂಡರ್: ಸ್ಥಳೀಯ ಭತ್ಯೆ ರೂ.100/- 30 ದಿನಗಳಿಗೆ ಮೀರದಂತೆ (ಯು.ಜಿ & ಪಿ.ಜಿ) |
| | | • ಸ್ವೀಪರ್: ರೂ.80+ರೂ.100=ರೂ.180/- | ಸ್ವೀಪರ್: ಸ್ಥಳೀಯ ಭತ್ಯೆ ರೂ.100/- 30 ದಿನಗಳಿಗೆ ಮೀರದಂತೆ (ಯು.ಜಿ & ಪಿ.ಜಿ) |

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(b)(05/23) |

## -:ಟಿಪ್ಪಣಿ:-

**ವಿಷಯ: ಪರೀಕ್ಷಾ ಅಕ್ರಮಗಳ ವಿಚಾರಣೆ ಮತ್ತು ಶಿಸ್ತು ಪಾಲನಾ ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಫೆಬ್ರವರಿ/ ಮಾರ್ಚ್-2023 ರಲ್ಲಿ ನಡೆದ ಸ್ನಾತಕ ಪರೀಕ್ಷೆಗಳಲ್ಲಿ ಅಕ್ರಮವೆಸಗಿರುವ 06 ವಿದ್ಯಾರ್ಥಿಗಳ ಪಟ್ಟಿಯನ್ನು ಮತ್ತು ದಿನಾಂಕ:24-03-2023 ರಂದು ನಡೆದ ಪರೀಕ್ಷಾ ಅಕ್ರಮಗಳ ವಿಚಾರಣೆ ಮತ್ತು ಶಿಸ್ತು ಪಾಲನಾ ಸಮಿತಿ ಸಭೆಯ ನಡಾವಳಿಯನ್ನು ಪರಿಶಿಲನೆ ಹಾಗೂ ಅನುಮೋದನೆಗಾಗಿ ದಿನಾಂಕ:30.05.2023ರ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮಂಡಿಸಲಾಗಿದೆ.

## ನಿರ್ಣಯ

ಫೆಬ್ರವರಿ/ ಮಾರ್ಚ್-2023 ರಲ್ಲಿ ನಡೆದ ಸ್ನಾತಕ ಪರೀಕ್ಷೆಗಳಲ್ಲಿ ಅಕ್ರಮವೆಸಗಿರುವ 06 ವಿದ್ಯಾರ್ಥಿಗಳ ಪಟ್ಟಿಯನ್ನು ಮತ್ತು ದಿನಾಂಕ:24-03-2023 ರಂದು ನಡೆದ ಪರೀಕ್ಷಾ ಅಕ್ರಮಗಳ ವಿಚಾರಣೆ ಮತ್ತು ಶಿಸ್ತು ಪಾಲನಾ ಸಮಿತಿ ಸಭೆಯ ನಡಾವಳಿಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(c)(05/23) |

# –:ಟಿಪ್ಪಣಿ:–

**ವಿಷಯಃ ಪರೀಕ್ಷಾ ಕೇಂದ್ರಗಳಿಗೆ ಲೇಖನ/ ಮುದ್ರಿತ ಸಾಮಾಗ್ರಿಗಳನ್ನು ಸರಬರಾಜು ಮಾಡುವ ಬದಲು ಸ್ಟೇಷನರಿ ವೆಚ್ಚ ಮಂಜೂರು ಮಾಡುವ ಕುರಿತು.**

*****

ವಿಶ್ವವಿದ್ಯಾನಿಲಯದ ಅಡಿಯಲ್ಲಿ ಬರುವ ಪರೀಕ್ಷಾ ಕೇಂದ್ರಗಳಿಗೆ ಅಗತ್ಯವಾಗಿ ಬೇಕಾಗುವ ಲೇಖನ/ ಮುದ್ರಿತ ಸಾಮಗ್ರಿಗಳನ್ನು ವಿಶ್ವವಿದ್ಯಾನಿಲಯದಿಂದ ವಿತರಿಸಲಾಗುತ್ತಿತು. ಆದರೆ, ಇನ್ನು ಮುಂದೆ ವಿದ್ಯಾರ್ಥಿಗಳ ಸಂಖ್ಯೆಗಳಿಗೆ ಅನುಗುಣವಾಗಿ ಪ್ರತಿ ವಿದ್ಯಾರ್ಥಿಗೆ ಸ್ಟೇಷನರಿ ವೆಚ್ಚವನ್ನು ಆಯಾ ಪರೀಕ್ಷಾ ಕೆಂದ್ರಕ್ಕೆ ಮಂಜೂರು ಮಾಡುವ ಸಂಬಂಧ ದಿನಾಂಕ:30.05.2023ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

| ಕ್ರಮ ಸಂಖ್ಯೆ | ವಿಶ್ವವಿದ್ಯಾನಿಲಯದ ಹೆಸರು | ಭರಿಸುವ ಸ್ಟೇಷನರಿ ವೆಚ್ಚ |
|---|---|---|
| 1 | ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ. | ಲಿಖಿತ ಪರೀಕ್ಷೆಗಳಿಗೆ ಪ್ರತಿ ವಿಧ್ಯಾರ್ಥಿಗೆ ರೂ.03/–ರಂತೆ (ಕನಿಷ್ಠ ರೂ.300/–) ಸ್ಟೇಷನರಿ ವೆಚ್ಚ ಪಡೆಯುವುದು. |
| 2 | ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ | ಪರೀಕ್ಷಾ ಕೇಂದ್ರಗಳಲ್ಲಿ ಲಿಖಿತ ಪರೀಕ್ಷೆಗಳಿಗೆ ಪ್ರತಿ ವಿಧ್ಯಾರ್ಥಿಗೆ ರೂ.05/–ರಂತೆ (ಕನಿಷ್ಠ ರೂ.500/–) ಸ್ಟೇಷನರಿ ವೆಚ್ಚ ಭರಿಸುವುದು ಹಾಗೂ ವೆಚ್ಚಕ್ಕೆ ಸಂಬಂಧಿಸಿದಂತೆ ಬಿಲ್ಲನ್ನು ಸಲ್ಲಿಸುವುದು. ಬಟ್ಟೆಗೆ ಪ್ರತಿ ಮೀಟರಿಗೆ ಗರಿಷ್ಠ ರೂ.40/–ರಂತೆ ಭರಿಸಿವುದು. |
| 3 | ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು. | Rs.20/- per Candidate, calculation shall be total Marks Card Fee Received/Marks card Fee × Rs.20-00 |

## <u>ನಿರ್ಣಯ</u>

ದಾವಣಗೆರೆ ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಕೇಂದ್ರಗಳಲ್ಲಿ ಲಿಖಿತ ಪರೀಕ್ಷೆಗಳಿಗೆ ಪ್ರತಿ ವಿದ್ಯಾರ್ಥಿಗೆ ರೂ. 04/–ರಂತೆ (ಕನಿಷ್ಠ ರೂ.400/–) ಪರೀಕ್ಷೆ ಬರೆದ ನಂತರ ವಿದ್ಯಾರ್ಥಿಗಳಿಗೆ ಅನುಗುಣವಾಗಿ ಸೈದ್ಧಾಂತಿಕ ಮತ್ತು ಪ್ರಯೋಗಿಕ ಉತ್ತರ ಪತ್ರಿಕೆ, ಮುದ್ರಿತ ನಮೂನೆಗಳನ್ನು ಹೊರತುಪಡಿಸಿ ಲೇಖನಾ ಸಾಮಗ್ರಿಗಳಿಗೆ ಮಾತ್ರ ಡಿ.ಸಿ. ಬಿಲ್ಲನ್ನು ಸಲ್ಲಿಸುವುದು. ಬಿಲ್ಲುಗಳನ್ನು ಸಲ್ಲಿಸಿದ ನಂತರ ವಿಶ್ವವಿದ್ಯಾನಿಲಯದಿಂದ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರ ಬ್ಯಾಂಕ್ ಖಾತೆಗೆ ನೇರವಾಗಿ ವೆಚ್ಚವನ್ನು ವರ್ಗಾಯಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　　　　　ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(d)(05/23) |

## –:ಟಿಪ್ಪಣಿ:–

**ವಿಷಯ:** **ಪರೀಕ್ಷಾ ಮೌಲ್ಯಮಾಪನದ ಸಂಭಾವನೆ ಬಿಲ್ಲಿನಲ್ಲಿ TDS ನ್ನು ಕಟಾಯಿಸುವ ಕುರಿತು.**

*****

2023–24ನೇ ಸಾಲಿನಿಂದ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿದ ಹಾಗೂ ಇತರೆ ಪರೀಕ್ಷಾ ಕಾರ್ಯ ನಿರ್ವಹಿಸಿದ ಅಧ್ಯಾಪಕರುಗಳಿಗೆ/ ಸಿಬ್ಬಂದಿಗಳಿಗೆ ವಿತರಿಸುವ ಸಂಭಾವನೆಯ ಮೊತ್ತದಲ್ಲಿ ನಿಯಮಾನುಸಾರ TDSನ್ನು ಶೇಕಡಾ 10% ರಷ್ಟು ಕಟಾಯಿಸುವ ಸಂಬಂಧ ದಿನಾಂಕ:30.05.2023ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### ನಿರ್ಣಯ

2023–24 ನೇ ಸಾಲಿನಿಂದ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದ ಸ್ನಾತಕ, ಸ್ನಾತಕೋತ್ತರ ಹಾಗೂ ಪಿಹೆಚ್.ಡಿ. ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಮೌಲ್ಯಮಾಪನ ಮಾಡಿದ ಬಾಹ್ಯ ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ನಿಯಮಾನುಸಾರ ಶೇಕಡಾ 10% ರಷ್ಟು TDS ನ್ನು ಕಟಾಯಿಸಲು ಸಭೆಯು ಚರ್ಚಿಸಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(e)(05/23) |

**–ಃಟಿಪ್ಪಣಿಃ–**

**ವಿಷಯಃ 10ನೇ ಘಟಿಕೋತ್ಸವ ಸಮಾರಂಭದ ಕಾರ್ಯಕ್ರಮಕ್ಕೆ ಪೆಂಡಾಲ್ (ಶಾಮಿಯಾನ), ಲೈಟಿಂಗ್ ಮತ್ತು ಆಸನದ ವ್ಯವಸ್ಥೆ ಮಾಡಿದ ಬಾಬ್ತು ರೂ:25,97,175/–ಗಳನ್ನು ಪಾವತಿಸುವ ಬಗ್ಗೆ.**

*****

ವಿಶ್ವವಿದ್ಯಾನಿಲಯದಲ್ಲಿ ಫೆಬ್ರವರಿ–2023 ರ ಮಾಹೆಯಲ್ಲಿ ನಡೆದ 10ನೇ ಘಟಿಕೋತ್ಸವ ಸಮಾರಂಭದ ಕಾರ್ಯಕ್ರಮವು ಸುಂದರವಾಗಿ ಕಾಣಲು ಪೆಂಡಾಲ್(ಶಾಮಿಯಾನ), ಲೈಟಿಂಗ್ ಮತ್ತು ಆಸನದ ವ್ಯವಸ್ಥೆಯನ್ನು ಮಾಡಲು ಇ–ಟೆಂಡರ್ ಕರೆಯಲಾಗಿತ್ತು. ಅದರಲ್ಲಿ ಯಶಸ್ವಿಯಾದ ಸಂಸ್ಥೆ **ಮೆ: ರಾಜು ಎಂಟರ್‌ಪ್ರೈಸಸ್, ಬೆಂಗಳೂರು** ರವರು ಇ–ಟೆಂಡರ್‌ನಲ್ಲಿ ನಮೂದಿಸಿದ ಮಾದರಿಯಂತೆ ಪೆಂಡಾಲ್(ಶಾಮಿಯಾನ), ಲೈಟಿಂಗ್ ಮತ್ತು ಆಸನದ ವ್ಯವಸ್ಥೆಯನ್ನು ಸರಬರಾಜು ಮಾಡಿರುತ್ತಾರೆ. ಸದರಿಯವರ ಬಿಲ್ಲಿನ **ಮೊತ್ತ ರೂ:25,97,175/–**(ರೂಪಾಯಿಗಳು ಇಪ್ಪತ್ತೈದು ಲಕ್ಷದ ತೊಂಭತ್ತೇಳು ಸಾವಿರದ ಒಂದು ನೂರಾ ಎಪ್ಪತ್ತೈದು ಮಾತ್ರ) ಗಳನ್ನು ಪಾವತಿಗಾಗಿ ಸಲ್ಲಿಸಿರುತ್ತಾರೆ. ಆದ್ದರಿಂದ ಬಿಲ್ಲಿನ ಮೊತ್ತವನ್ನು ಪಾವತಿಸಲು ದಿನಾಂಕ:30–05–2023 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಮಂಡಿಸಿದೆ.

**ನಿರ್ಣಯ**

ಫೆಬ್ರವರಿ–2023 ರ ಮಾಹೆಯಲ್ಲಿ ನಡೆದ 10ನೇ ಘಟಿಕೋತ್ಸವ ಸಮಾರಂಭಕ್ಕೆ ಸಂಬಂಧಿಸಿದಂತೆ ಪೆಂಡಾಲ್ (ಶಾಮಿಯಾನ), ಲೈಟಿಂಗ್ ಮತ್ತು ಆಸನದ ವ್ಯವಸ್ಥೆಯನ್ನು ಸರಬರಾಜು ಮಾಡಿದ ಬಿಲ್ಲುಗಳಿಗೆ ಸಂಬಂಧಿಸಿದಂತೆ ದಿನಾಂಕ:29.05.2023ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಸದರಿ ಬಿಲ್ಲಿನ ಬಾಬ್ತು **ರೂ:25,97,175/–** ಗಳನ್ನು ಇ–ಟೆಂಡರ್‌ನಲ್ಲಿ ಯಶಸ್ವಿಯಾದ **ಮೆ: ರಾಜು ಎಂಟರ್ ಪ್ರೈಸಸ್, ಬೆಂಗಳೂರು** – ಇವರಿಗೆ ಪಾವತಿಸುವ ಸಂಬಂಧ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(f)(05/23) |

## -:ಟಿಪ್ಪಣಿ:-

**ವಿಷಯ: 10ನೇ ಘಟಿಕೋತ್ಸವ ಸಮಾರಂಭದ ಕಾರ್ಯಕ್ರಮದಲ್ಲಿ ಉಪಹಾರ, ಸ್ನ್ಯಾಕ್ಸ್ ಮತ್ತು ಊಟ ಸರಬರಾಜು ಮಾಡಿದ ಬಾಬ್ತು ರೂ:4,60,466/-ಗಳನ್ನು ಪಾವತಿಸುವ ಬಗ್ಗೆ.**

*****

ವಿಶ್ವವಿದ್ಯಾನಿಲಯದ 10 ನೇ ಘಟಿಕೋತ್ಸವ ಸಮಾರಂಭದ ಕಾರ್ಯಕ್ರಮಕ್ಕೆ ಆಗಮಿಸುವ ಗಣ್ಯ ವ್ಯಕ್ತಿಗಳು, ಸಿಂಡಿಕೇಟ್/ ವಿದ್ಯಾವಿಷಯಕ ಪರಿಷತ್ ಸದಸ್ಯರುಗಳು, ಪೋಷಕರು, ವಿದ್ಯಾರ್ಥಿಗಳು ಮತ್ತು ವಿಶ್ವವಿದ್ಯಾನಿಲಯದ ಎಲ್ಲಾ ಸಿಬ್ಬಂದಿಗಳಿಗೆ ಉಪಹಾರ, ಸ್ನ್ಯಾಕ್ಸ್ ಮತ್ತು ಊಟ ಸರಬರಾಜು ಮಾಡುವ ಸಲುವಾಗಿ ಇ-ಟೆಂಡರ್ ಕರೆಯಲಾಗಿತ್ತು. ಅದರಲ್ಲಿ ಯಶಸ್ವಿಯಾದ ಸಂಸ್ಥೆ ಶ್ರೀ. ಹೆಚ್.ಆರ್. ಪಾಟೀಲ್ & ಸನ್ಸ್ ಮೆ:ಪಾಟೀಲ್ ಅಸೋಸಿಯೇಟ್ಸ್, ರಾಣೆಬೆನ್ನೂರು ರವರು ಉಪಹಾರ, ಸ್ನ್ಯಾಕ್ಸ್ ಮತ್ತು ಊಟ ಸರಬರಾಜು ಮಾಡಿರುತ್ತಾರೆ. ಸದರಿಯವರ ಬಿಲ್ಲಿನ ಮೊತ್ತ ರೂ:4,60,466/- (ರೂಪಾಯಿಗಳು ನಾಲ್ಕು ಲಕ್ಷದ ಅರವತ್ತು ಸಾವಿರದ ನಾಲ್ಕು ನೂರಾ ಅರವತ್ತಾರು ಮಾತ್ರ) ಗಳನ್ನು ಪಾವತಿಗಾಗಿ ಸಲ್ಲಿಸಿರುತ್ತಾರೆ. ಆದ್ದರಿಂದ ಬಿಲ್ಲಿನ ಮೊತ್ತವನ್ನು ಪಾವತಿಸಲು ದಿನಾಂಕ:30-05-2023 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಮಂಡಿಸಿದೆ.

### ನಿರ್ಣಯ

ಫೆಬ್ರವರಿ-2023 ರ ಮಾಹೆಯಲ್ಲಿ ನಡೆದ 10ನೇ ಘಟಿಕೋತ್ಸವ ಸಮಾರಂಭಕ್ಕೆ ಸಂಬಂಧಿಸಿದಂತೆ ಉಪಹಾರ, ಸ್ನ್ಯಾಕ್ಸ್ ಮತ್ತು ಊಟ ಸರಬರಾಜು ಮಾಡಿದ ಬಿಲ್ಲುಗಳಿಗೆ ಸಂಬಂಧಿಸಿದಂತೆ ದಿನಾಂಕ:29.05.2023ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಸದರಿ ಬಿಲ್ಲಿನ ಬಾಬ್ತು **ರೂ:4,60,466/-** ಗಳನ್ನು ಇ-ಟೆಂಡರ್‌ನಲ್ಲಿ ಯಶಸ್ವಿಯಾದ **ಶ್ರೀ. ಹೆಚ್. ಆರ್. ಪಾಟೀಲ್ & ಸನ್ಸ್ ಮೆ:ಪಾಟೀಲ್ ಅಸೋಸಿಯೇಟ್ಸ್, ರಾಣೆಬೆನ್ನೂರು** - ಇವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(g)(05/23) |

## –:ಟಿಪ್ಪಣಿ:–

**ವಿಷಯಃ ಫೆಬ್ರವರಿ/ ಮಾರ್ಚ್–2023 ರ ಪದವಿ ಪರೀಕ್ಷೆಗಳಿಗೆ ಮತ್ತು ಘಟಿಕೋತ್ಸವ ಸಮಾರಂಭದ ಕಾರ್ಯಕ್ರಮಕ್ಕೆ ಬೇಕಾಗುವ ಲೇಖನ/ ಮುದ್ರಿತ ಸಾಮಾಗ್ರಿಗಳನ್ನು ಖರೀದಿಸಿದ ಬಾಬ್ತು ರೂ:11,70,751/– ಗಳನ್ನು ಪಾವತಿಸುವ ಬಗ್ಗೆ.**

*****

ಫೆಬ್ರವರಿ/ ಮಾರ್ಚ್–2023 ರ ಪದವಿ ಪರೀಕ್ಷೆಗಳಿಗೆ ಮತ್ತು 10 ನೇ ಘಟಿಕೋತ್ಸವ ಸಮಾರಂಭದ ಕಾರ್ಯಕ್ರಮಕ್ಕೆ ಬೇಕಾದ ಲೇಖನ/ ಮುದ್ರಣ ಲೇಖನ ಸಾಮಾಗ್ರಿಗಳನ್ನು ಇ-ಟೆಂಡರ್ ನಲ್ಲಿ ಯಶಸ್ವಿಯಾದ Sri. Uttamchand Indira M/S.Ujeshasta Enterprises, Harapanahalli – ಇವರಿಂದ ಖರೀದಿಸಲಾಗಿದ್ದು, ಸದರಿಯವರು ಬಿಲ್ಲಿನ ಬಾಬ್ತು **ರೂ:11,70,751/–** (ರೂಪಾಯಿಗಳು ಹನ್ನೊಂದು ಲಕ್ಷದ ಎಪ್ಪತ್ತು ಸಾವಿರದ ಏಳೂ ನೂರಾ ಐವತ್ತೊಂದು ಮಾತ್ರ) ಗಳನ್ನು ಪಾವತಿಗಾಗಿ ಸಲ್ಲಿಸಿರುತ್ತಾರೆ. ಆದ್ದರಿಂದ ಬಿಲ್ಲಿನ ಮೊತ್ತವನ್ನು ಪಾವತಿಸಲು ದಿನಾಂಕ:30–05–2023 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಾಗಹನೆಗೆ ಮತ್ತು ಅನುಮೋದನೆಗೆ ಮಂಡಿಸಿದೆ.

### ನಿರ್ಣಯ

ಫೆಬ್ರವರಿ/ ಮಾರ್ಚ್–2023 ರ ಪದವಿ ಪರೀಕ್ಷೆಗಳಿಗೆ ಮತ್ತು 10 ನೇ ಘಟಿಕೋತ್ಸವ ಸಮಾರಂಭಕ್ಕೆ ಸಂಬಂಧಿಸಿದಂತೆ ಲೇಖನ/ ಮುದ್ರಣ ಲೇಖನ ಸಾಮಾಗ್ರಿಗಳನ್ನು ಸರಬರಾಜು ಮಾಡಿದ ಬಿಲ್ಲುಗಳಿಗೆ ಸಂಬಂಧಿಸಿದಂತೆ ದಿನಾಂಕ:29.05.2023 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಸದರಿ ಬಿಲ್ಲಿನ ಬಾಬ್ತು **ರೂ:11,70,751/–**ಗಳನ್ನು ಇ–ಟೆಂಡರ್‌ನಲ್ಲಿ ಯಶಸ್ವಿಯಾದ Sri. Uttamchand Indira M/S.Ujeshasta Enterprises, Harapanahalli – ಇವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(h)(05/23) |

## –:ಟಿಪ್ಪಣಿ:–

**ವಿಷಯಃ ಫೆಬ್ರವರಿ/ ಮಾರ್ಚ್–2023ರಲ್ಲಿ ನಡೆದ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷಾ ಕಾರ್ಯಗಳಿಗೆ ದಿನದ ಬಾಡಿಗೆ ಆಧಾರದ ಮೇಲೆ ವಾಹನ ಸರಬರಾಜು ಮಾಡಿದ ಬಾಬ್ತು ರೂ:4,63,725/– ಗಳನ್ನು ಪಾವತಿಸುವ ಕುರಿತು.**

*****

ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ವಿವಿಧ ಪದವಿ ಸ್ನಾತಕ/ ಸ್ನಾತಕೋತ್ತರ ಪರೀಕ್ಷಾ ಕಾರ್ಯಗಳಿಗೆ ದಿನದ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಸರಬರಾಜು ಮಾಡಲು 2022-2023 ನೇ ಸಾಲಿನಲ್ಲಿ ಇ–ಟೆಂಡರ್ ಕರೆಯಲಾಗಿದ್ದು. ಅದರಲ್ಲಿ ಯಶಸ್ವಿಯಾದ ಸಂಸ್ಥೆ Sri Nazeer Sab M/S Al-Hind Tours & Travels, Davangere ಇವರಿಂದ ದಿನದ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಪಡೆಯಲಾಗಿತ್ತು. ಅದರಂತೆ ಸದರಿಯವರಿಂದ ವಾಹನಗಳನ್ನು ಬಳಸಿಕೊಂಡು ಫೆಬ್ರವರಿ/ ಮಾರ್ಚ್–2023ರ ಪರೀಕ್ಷಾ ಕಾರ್ಯಗಳನ್ನು ನಡೆಸಲಾಗಿತ್ತು. ಸದರಿಯವರು ದಿನದ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಸರಬರಾಜು ಮಾಡಿದ ಬಿಲ್ಲಿನ ಮೊತ್ತ ರೂ:4,63,725–00 (ರೂಪಾಯಿಗಳು ನಾಲ್ಕು ಲಕ್ಷದ ಅರವತ್ಮೂರು ಸಾವಿರದ ಏಳೂ ನೂರಾ ಇಪ್ಪತ್ತೈದು ಮಾತ್ರ) ಗಳನ್ನು ಪಾವತಿಗಾಗಿ ಸಲ್ಲಿಸಿರುತ್ತಾರೆ. ಆದ್ದರಿಂದ ಬಿಲ್ಲಿನ ಮೊತ್ತವನ್ನು ಪಾವತಿಸಲು ದಿನಾಂಕ:30–05–2023 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಾಗಹನೆಗೆ ಮತ್ತು ಅನುಮೋದನೆಗೆ ಮಂಡಿಸಿದೆ.

### ನಿರ್ಣಯ

ಫೆಬ್ರವರಿ/ ಮಾರ್ಚ್–2023ರ ಪರೀಕ್ಷಾ ಕಾರ್ಯಗಳಿಗೆ ದಿನದ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಸರಬರಾಜು ಮಾಡಿದ ಬಿಲ್ಲುಗಳಿಗೆ ಸಂಬಂಧಿಸಿದಂತೆ ದಿನಾಂಕ:29.05.2023ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಸದರಿ ಬಿಲ್ಲಿನ ಬಾಬ್ತು ರೂ. **4,63,725–00 ಗಳನ್ನು** 2022-2023 ನೇ ಸಾಲಿನಲ್ಲಿ ಇ–ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ **Sri Nazeer Sab M/S Al-Hind Tours & Travels, Davangere** – ಇವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(i)(05/23) |

## -:ಟಿಪ್ಪಣಿ:-

ವಿಷಯ: **2022-23 ನೇ ಸಾಲಿನ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, ಹೊಸ ಪರೀಕ್ಷಾ ತಂತ್ರಾಂಶ ಅಳವಡಿಸಿರುವ ಬಾಬ್ತು ಹಣ ಪಾವತಿ ಮಾಡುವ ಬಗ್ಗೆ.**

*****

ವಿಶ್ವವಿದ್ಯಾನಿಲಯದ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, 2018-19ನೇ ಸಾಲಿನಿಂದ ಪರೀಕ್ಷಾ ಫಲಿತಾಂಶದಲ್ಲಿ ಸುಧಾರಣೆ ಹಾಗೂ ತ್ವರಿತವಾಗಿ ಫಲಿತಾಂಶವನ್ನು ನೀಡುವ ಸಲುವಾಗಿ ಇ-ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ M/S;Logisys, Bangalore ಇವರಿಂದ ಹೊಸ ಪರೀಕ್ಷಾ ತಂತ್ರಾಂಶ ಅಳವಡಿಸಿಕೊಂಡು ಪ್ರತಿ ವಿದ್ಯಾರ್ಥಿಗೆ ರೂ.201/- ರಂತೆ ಅಂದಾಜು 46,458 ಸ್ನಾತಕ/ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸೆಪ್ಟಂಬರ್/ ಅಕ್ಟೋಬರ್-2022 ರ ಪರೀಕ್ಷಾ ಕಾರ್ಯ ನಿರ್ವಹಿಸಿದ ಸದರಿ ಸಂಸ್ಥೆಯಾದ M/S;Logisys, Bangalore ಇವರು ಬಿಲ್ಲನ್ನು ಪಾವತಿಗಾಗಿ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿಯವರ **ಮೂರನೇ ಕಂತಿನ ಬಿಲ್ಲಿನ ಮೊತ್ತ ರೂ.28,01,417/-** (ರೂಪಾಯಿಗಳು ಇಪ್ಪತ್ತೆಂಟು ಲಕ್ಷದ ಒಂದು ಸಾವಿರದ ನಾಲ್ಕು ನೂರಾ ಹದಿನೇಳು ಮಾತ್ರ) ಗಳಾಗಿರುತ್ತದೆ. ಆದ್ದರಿಂದ ಸದರಿ ಬಿಲ್ಲಿನ ಮೊತ್ತವನ್ನು ಪಾವತಿಸಲು ದಿನಾಂಕ:30-05-2023 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಮಂಡಿಸಿದೆ.

## ನಿರ್ಣಯ

ಸೆಪ್ಟಂಬರ್/ ಅಕ್ಟೋಬರ್-2022 ರ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷಾ ಕಾರ್ಯ ನಿರ್ವಹಿಸಿದ ಹಾಗೂ ಇ-ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ M/S; Logisys, Bangalore - ಇವರ **ಮೂರನೇ ಕಂತಿನ** ಬಿಲ್ಲುಗಳನ್ನು ದಿನಾಂಕ:29.05.2023 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಸದರಿ ಬಿಲ್ಲಿನ **ಬಾಬ್ತು ರೂ.28,01,417/- ಗಳನ್ನು M/S;Logisys, Bangalore -** ಇವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(j)(05/23) |

## –:ಟಿಪ್ಪಣಿ:–

ವಿಷಯ: **2022–23 ನೇ ಸಾಲಿನ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಹೊಸ ಪರೀಕ್ಷಾ ತಂತ್ರಾಂಶ ಅಳವಡಿಸಿರುವ ಬಾಬ್ತು ಹಣ ಪಾವತಿ ಮಾಡುವ ಬಗ್ಗೆ.**

*****

ವಿಶ್ವವಿದ್ಯಾನಿಲಯದ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, 2018–19 ನೇ ಸಾಲಿನಿಂದ ಪರೀಕ್ಷಾ ಫಲಿತಾಂಶದಲ್ಲಿ ಸುಧಾರಣೆ ಹಾಗೂ ತ್ವರಿತವಾಗಿ ಫಲಿತಾಂಶವನ್ನು ನೀಡುವ ಸಲುವಾಗಿ ಇ–ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ M/S;Uniclare Solutions Pvt. Ltd., Bangalore ಇವರಿಂದ ಹೊಸ ಪರೀಕ್ಷಾ ತಂತ್ರಾಂಶ ಅಳವಡಿಸಿಕೊಂಡು ಪ್ರತಿ ವಿದ್ಯಾರ್ಥಿಗೆ ರೂ.127/– ರಂತೆ ಅಂದಾಜು 46,458 ಸ್ನಾತಕ/ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸೆಪ್ಟಂಬರ್/ ಅಕ್ಟೋಬರ್–2022 ರ ಪರೀಕ್ಷಾ ಕಾರ್ಯ ನಿರ್ವಹಿಸಿದ ಸದರಿ ಸಂಸ್ಥೆಯಾದ M/S;Uniclare Solutions Pvt. Ltd., Bangalore ಇವರು ಬಿಲ್ಲನ್ನು ಪಾವತಿಗಾಗಿ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿಯವರ **ಮೂರನೇ ಕಂತಿನ** ಬಿಲ್ಲಿನ ಮೊತ್ತ **ರೂ.17,70,049/-** (ರೂಪಾಯಿಗಳು ಹದಿನೇಳು ಲಕ್ಷದ ಎಪ್ಪತ್ತು ಸಾವಿರದ ನಲವತ್ತೊಂಭತ್ತು ಮಾತ್ರ) ಗಳಾಗಿರುತ್ತದೆ. ಆದ್ದರಿಂದ ಸದರಿ ಬಿಲ್ಲಿನ ಬಿಲ್ಲಿನ ಮೊತ್ತವನ್ನು ಪಾವತಿಸಲು ದಿನಾಂಕ:30–05–2023 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಮಂಡಿಸಿದೆ.

### ನಿರ್ಣಯ

ಸೆಪ್ಟಂಬರ್/ ಅಕ್ಟೋಬರ್–2022 ರ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷಾ ಕಾರ್ಯ ನಿರ್ವಹಿಸಿದ ಹಾಗೂ ಇ–ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ M/S; Uniclare Solutions Pvt. Ltd., Bangalore - ಇವರ **ಮೂರನೇ ಕಂತಿನ** ಬಿಲ್ಲುಗಳನ್ನು ದಿನಾಂಕ:29.05.2023 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಸದರಿ ಬಿಲ್ಲಿನ **ಬಾಬ್ತು ರೂ. 17,70,049/- ಗಳನ್ನು M/S;Uniclare Solutions Pvt. Ltd., Bangalore -** ಇವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಪ್ರಿಂ.06(k)(05/23) |

## -:ಟಿಪ್ಪಣಿ:-

ವಿಷಯ: **2022-23 ನೇ ಸಾಲಿನ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, ಹೊಸ ಪರೀಕ್ಷಾ ತಂತ್ರಾಂಶ ಅಳವಡಿಸಿರುವ ಬಾಬ್ತು ಹಣ ಪಾವತಿ ಮಾಡುವ ಬಗ್ಗೆ.**

*****

ವಿಶ್ವವಿದ್ಯಾನಿಲಯದ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, 2018-19ನೇ ಸಾಲಿನಿಂದ ಪರೀಕ್ಷಾ ಫಲಿತಾಂಶದಲ್ಲಿ ಸುಧಾರಣೆ ಹಾಗೂ ತ್ವರಿತವಾಗಿ ಫಲಿತಾಂಶವನ್ನು ನೀಡುವ ಸಲುವಾಗಿ ಇ-ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ M/S;Logisys, Bangalore ಇವರಿಂದ ಹೊಸ ಪರೀಕ್ಷಾ ತಂತ್ರಾಂಶ ಅಳವಡಿಸಿಕೊಂಡು ಪ್ರತಿ ವಿದ್ಯಾರ್ಥಿಗೆ ರೂ.201/- ರಂತೆ ಅಂದಾಜು 46,462 ಸ್ನಾತಕ/ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸೆಪ್ಟಂಬರ್/ ಅಕ್ಟೋಬರ್-2022 ರ ಪರೀಕ್ಷಾ ಕಾರ್ಯ ನಿರ್ವಹಿಸಿದ ಸದರಿ ಸಂಸ್ಥೆಯಾದ **M/S;Logisys,** Bangalore ಇವರು ಬಿಲ್ಲನ್ನು ಪಾವತಿಗಾಗಿ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿಯವರ ಅಂತಿಮ **4ನೇ ಕಂತಿನ ಬಿಲ್ಲಿನ ಮೊತ್ತ ರೂ.9,34,611/-(ರೂಪಾಯಿಗಳು ಒಂಭತ್ತು ಲಕ್ಷದ ಮುವತ್ನಾಲ್ಕು ಸಾವಿರದ ಆರು ನೂರ ಹನ್ನೊಂದು ಮಾತ್ರ)** ಗಳಾಗಿರುತ್ತದೆ. ಆದ್ದರಿಂದ ಸದರಿ ಬಿಲ್ಲಿನ ಬಿಲ್ಲಿನ ಮೊತ್ತವನ್ನು ಪಾವತಿಸಲು ದಿನಾಂಕ:30-05-2023 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಮಂಡಿಸಿದೆ.

### ನಿರ್ಣಯ

ಸೆಪ್ಟಂಬರ್/ ಅಕ್ಟೋಬರ್-2022 ರ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷಾ ಕಾರ್ಯ ನಿರ್ವಹಿಸಿದ ಹಾಗೂ ಇ-ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ M/S; Logisys, Bangalore - ಇವರ **ನಾಲ್ಕನೇ ಕಂತಿನ** ಬಿಲ್ಲುಗಳನ್ನು ದಿನಾಂಕ:29.05.2023 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಸದರಿ ಬಿಲ್ಲಿನ **ಬಾಬ್ತು ರೂ.9,34,611/-** ಗಳನ್ನು **M/S; Logisys, Bangalore** - ಇವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
| --- | --- |
| ವಿಷಯ ಸಂಖ್ಯೆ: | ಸಿಂ.06(I)(05/23) |

# -:ಟಿಪ್ಪಣಿ:-

ವಿಷಯ: **2022-23 ನೇ ಸಾಲಿನ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, ಹೊಸ ಪರೀಕ್ಷಾ ತಂತ್ರಾಂಶ ಅಳವಡಿಸಿರುವ ಬಾಬ್ತು ಹಣ ಪಾವತಿ ಮಾಡುವ ಬಗ್ಗೆ.**

*****

ವಿಶ್ವವಿದ್ಯಾನಿಲಯದ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, 2018-19 ನೇ ಸಾಲಿನಿಂದ ಪರೀಕ್ಷಾ ಫಲಿತಾಂಶದಲ್ಲಿ ಸುಧಾರಣೆ ಹಾಗೂ ತ್ವರಿತವಾಗಿ ಫಲಿತಾಂಶವನ್ನು ನೀಡುವ ಸಲುವಾಗಿ ಇ-ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ M/S;Uniclare Solutions Pvt. Ltd., Bangalore ಇವರಿಂದ ಹೊಸ ಪರೀಕ್ಷಾ ತಂತ್ರಾಂಶ ಅಳವಡಿಸಿಕೊಂಡು ಪ್ರತಿ ವಿದ್ಯಾರ್ಥಿಗೆ ರೂ.127/- ರಂತೆ ಅಂದಾಜು 46,462 ಸ್ನಾತಕ/ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸೆಪ್ಟಂಬರ್/ ಅಕ್ಟೋಬರ್-2022 ರ ಪರೀಕ್ಷಾ ಕಾರ್ಯ ನಿರ್ವಹಿಸಿದ ಸದರಿ ಸಂಸ್ಥೆಯಾದ **M/S;Uniclare Solutions Pvt. Ltd., Bangalore** ಇವರು ಬಿಲ್ಲನ್ನು ಪಾವತಿಗಾಗಿ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿಯವರ ಅಂತಿಮ **ನಾಲ್ಕನೇ ಕಂತಿನ ಬಿಲ್ಲಿನ ಮೊತ್ತ ರೂ.5,90,527/-** (ರೂಪಾಯಿಗಳು ಐದು ಲಕ್ಷದ ತೊಂಭತ್ತು ಸಾವಿರದ ಐದುನೂರ ಇಪ್ಪತ್ತೇಳು ಮಾತ್ರ) ಗಳಾಗಿರುತ್ತದೆ. ಆದ್ದರಿಂದ ಸದರಿ ಬಿಲ್ಲಿನ ಬಿಲ್ಲಿನ ಮೊತ್ತವನ್ನು ಪಾವತಿಸಲು ದಿನಾಂಕ:30-05-2023 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಮಂಡಿಸಿದೆ.

## ನಿರ್ಣಯ

ಸೆಪ್ಟಂಬರ್/ ಅಕ್ಟೋಬರ್-2022 ರ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷಾ ಕಾರ್ಯ ನಿರ್ವಹಿಸಿದ ಹಾಗೂ ಇ-ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ M/S; Uniclare Solutions Pvt. Ltd., Bangalore - ಇವರ **ನಾಲ್ಕನೇ ಕಂತಿನ** ಬಿಲ್ಲುಗಳನ್ನು ದಿನಾಂಕ:29.05.2023 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಸದರಿ ಬಿಲ್ಲಿನ **ಬಾಬ್ತು ರೂ. 5,90,527/- ಗಳನ್ನು M/S;Uniclare Solutions Pvt. Ltd., Bangalore -** ಇವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　　　ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(m)(05/23) |

## –:ಟಿಪ್ಪಣಿ:–

**ವಿಷಯ:** ಪರೀಕ್ಷಾಂಗ ವಿಭಾಗಕ್ಕೆ ಹೊಸದಾಗಿ **Heavy Duty Xerox Machine** ಮತ್ತು **Marks Card Colour Printer Machine** ನ್ನು ಖರೀದಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಯು.ಯು.ಸಿ.ಎಂ.ಎಸ್., ಪರೀಕ್ಷಾ ಫಲಿತಾಂಶ ಪ್ರಕಟಗೊಂಡ ಬಳಿಕ ವಿದ್ಯಾರ್ಥಿಗಳ ಮಾರ್ಕ್ಸ್ ಲೆಡ್ಜರ್ ಶೀಟ್‌ಗಳನ್ನು ಹಾಗೂ ಅಂಕಪಟ್ಟಿಗಳನ್ನು ಮುದ್ರಿಸಿ ಕಾಲೇಜುಗಳಿಗೆ ಸರಬರಾಜು ಮಾಡುವ ಸಂಬಂಧ ಪರೀಕ್ಷಾಂಗ ವಿಭಾಗಕ್ಕೆ ಪ್ರಿಂಟರ್‌ನ ಅವಶ್ಯಕತೆ ಇರುವುದರಿಂದ ಪರೀಕ್ಷಾಂಗ ವಿಭಾಗಕ್ಕೆ ಹೊಸದಾಗಿ Heavy Duty Xerox Machine- 01 ಮತ್ತು Marks Card Colour Printer Machine - 01 ನ್ನು ಖರೀದಿಸುವ ಸಂಬಂಧ ದಿನಾಂಕ:30–05–2023 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಮಂಡಿಸಿದೆ.

### ನಿರ್ಣಯ

ಯು.ಯು.ಸಿ.ಎಂ.ಎಸ್., ಪರೀಕ್ಷಾ ಫಲಿತಾಂಶ ಪ್ರಕಟಗೊಂಡ ಬಳಿಕ ವಿದ್ಯಾರ್ಥಿಗಳ ಮಾರ್ಕ್ಸ್ ಲೆಡ್ಜರ್ ಶೀಟ್‌ಗಳನ್ನು ಹಾಗೂ ಅಂಕಪಟ್ಟಿಗಳನ್ನು ಮುದ್ರಿಸಿ ಕಾಲೇಜುಗಳಿಗೆ ಸರಬರಾಜು ಮಾಡಲು ಅವಶ್ಯವಿರುವ **Heavy Duty Xerox Machine- 01** ಮತ್ತು **Marks Card Colour Printer Machine - 01** ನ್ನು (ಅಂದಾಜು ರೂ. 5.00 ಲಕ್ಷ) **GEM** ಮುಖಾಂತರ ಕಂಪನಿಯಿಂದ ಖರೀದಿಸಲು ಸಭೆಯು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.07(a)(05/23) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ ಜ್ಞಾನಸೌಧ ಕಟ್ಟಡದಲ್ಲಿ ಸ್ಟೇಜ್ ನಿರ್ಮಾಣ ಕಾಮಗಾರಿಯನ್ನು ಸರ್ಕಾರಿ ಸಂಸ್ಥೆಯಾದ ನಿರ್ಮಿತಿ ಕೇಂದ್ರ ದಾವಣಗೆರೆ ಇವರು ಪೂರ್ಣಗೊಳಿಸಿದ್ದು ಇವರಿಗೆ ರೂ. 14.80 ಲಕ್ಷ ಪಾವತಿಸುವ ಕುರಿತು.**

*****

ವಿಶ್ವವಿದ್ಯಾನಿಲಯದ ಜ್ಞಾನಸೌಧ ಕಟ್ಟಡದಲ್ಲಿ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಪಟ್ಟ ಸಂಬಂಧಪಟ್ಟ ಘಟಿಕೋತ್ಸವ ಸಭೆ, ಸಮಾರಂಭಗಳು ಹಾಗೂ ಇನ್ನಿತರ ಶೈಕ್ಷಣಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಸ್ಟೇಜ್ ನಿರ್ಮಾಣ ಕಾಮಗಾರಿಯನ್ನು ಸರ್ಕಾರಿ ಸಂಸ್ಥೆಯಾದ ನಿರ್ಮಿತಿ ಕೇಂದ್ರ ದಾವಣಗೆರೆ ಇವರಿಗೆ ಮುಂಗಡ ಠೇವಣಿವಂತಿಗೆ ಆಧಾರದ ಮೇಲೆ ಇವರಿಗೆ ವಹಿಸಲಾಗಿತ್ತು.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ **ದಿನಾಂಕ:24.02.2023ರ ಸಿಂಡಿಕೇಟ್ ವಿಶೇಷ ಸಭೆಯಲ್ಲಿ** ಮಂಡಿಸಿ ಘಟನೋತ್ತರ ಅನುಮೋದನೆಯನ್ನು ಪಡೆಯಲಾಗಿತ್ತು.

ಈಗ ಸದರಿಯವರು ಕಾಮಗಾರಿಯನ್ನು ಪೂರ್ಣಗೊಳಿಸಿ Work Completion Report ನೀಡಿದ್ದು ಅವರಿಗೆ ಕಾಮಗಾರಿ ಒಟ್ಟು ಅಂದಾಜು ಮೊತ್ತ **ರೂ. 14.80 ಲಕ್ಷ** ಪಾವತಿಸಲು ದಿನಾಂಕ:30.05.2023ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

### <u>ನಿರ್ಣಯ</u>

ವಿಶ್ವವಿದ್ಯಾನಿಲಯದ ಜ್ಞಾನಸೌಧ ಕಟ್ಟಡದಲ್ಲಿ ಸ್ಟೇಜ್ ನಿರ್ಮಾಣ ಕಾಮಗಾರಿಯನ್ನು ಸರ್ಕಾರಿ ಸಂಸ್ಥೆಯಾದ ನಿರ್ಮಿತಿ ಕೇಂದ್ರ ದಾವಣಗೆರೆ ಇವರು ಪೂರ್ಣಗೊಳಿಸಿ Work Completion Report ನೀಡಿರುವುದರಿಂದ ಸದರಿಯವರಿಗೆ **ರೂ. 14.80 ಲಕ್ಷ** ಗಳನ್ನು ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.07(b)(05/23) |

## -:ಟಿಪ್ಪಣಿ:-

**ವಿಷಯ: ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಆಡಳಿತ ಭವನದ 30KVA ಸಾಮರ್ಥ್ಯದ UPS ಗೆ 7 ವರ್ಷ ಹಳೆಯದಾದ & ಹಾಳಾದ 30 ಸಂಖ್ಯೆ ಬ್ಯಾಟರಿಗಳನ್ನು Buy Back ನಲ್ಲಿ ಬದಲಿಸಿ ಹೊಸದಾಗಿ 30 ಸಂಖ್ಯೆ ಬ್ಯಾಟರಿಗಳನ್ನು ಖರೀದಿಸಿ ಅಳವಡಿಸಿದ ಮೊತ್ತ: 4.60 ಲಕ್ಷ. ಗಳನ್ನು ಪಾವತಿಸಲು ಅನುಮೋದನೆ ಕುರಿತು.**

*****

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಆಡಳಿತ ಭವನದ ಮೊದಲನೇ ಮಹಡಿಯಲ್ಲಿ 7 ವರ್ಷದ ಮುಂಚೆ 30 KVA ಸಾಮರ್ಥ್ಯದ UPSನ 30 ಸಂಖ್ಯೆ ಬ್ಯಾಟರಿಗಳನ್ನು ಅಳವಡಿಸಿತ್ತು. ಈಗ ಸದರಿ ಬ್ಯಾಟರಿಗಳು ಹಾಳಾಗಿದ್ದು ಅವುಗಳನ್ನು ಹೊಸದಾಗಿ ಅಳವಡಿಸುವ ಅವಶ್ಯಕತೆ ಇದ್ದು ತುರ್ತಾಗಿ Buy Back ನಲ್ಲಿ ಖರೀದಿಸಿ ಅಳವಡಿಸಿದ್ದು, ಅದರ ಅಂದಾಜು ಮೊತ್ತ ರೂ. 4.60 ಲಕ್ಷ ಆಗಿದ್ದು ಘಟನೋತ್ತರ ಅನುಮೋದನೆ ಪಡೆಯಲು ದಿನಾಂಕ:30.05.2023ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ಆಡಳಿತ ಭವನದ ಮೊದಲನೇ ಮಹಡಿಯಲ್ಲಿ 7 ವರ್ಷದ ಹಳೆಯ 30 KVA ಸಾಮರ್ಥ್ಯದ UPSನ 30 ಬ್ಯಾಟರಿಗಳು ಹಾಳಾಗಿದ್ದರಿಂದ ಅವುಗಳನ್ನು ಬದಲಾಯಿಸಿ ಹೊಸದಾಗಿ Buy Back ನಲ್ಲಿ ಬ್ಯಾಟರಿಗಳನ್ನು ಖರೀದಿಸಿ ಅಳವಡಿಸಲಾಗಿದ್ದು, ಸದರಿ ಬಿಲ್ಲಿನ ಬಾಬ್ತು **ರೂ. 4.60 ಲಕ್ಷಗಳನ್ನು** ಪಾವತಿಸಲು ಘಟನೋತ್ತರವಾಗಿ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.07(c)(05/23) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿ ತುಂಗಾ ಮಹಿಳಾ ವಸತಿ ನಿಲಯದ ನೆಲ ಮಹಡಿಯಲ್ಲಿರುವ ಕೊಠಡಿಗೆ ಅಲ್ಯೂಮಿನಿಯಂ ಪಾರ್ಟಿಷನ್ ಮಾಡಿಸುವ ಕುರಿತು.**

*****

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿರುವ **ತುಂಗಾ ಮಹಿಳಾ ವಸತಿ ನಿಲಯದ ನೆಲ ಮಹಡಿಯಲ್ಲಿರುವ 05 ಕೊಠಡಿಗಳಿಗೆ** ಅಲ್ಯೂಮಿನಿಯಂ ಪಾರ್ಟಿಷನ್ ನಿರ್ಮಿಸುವ ಅವಶ್ಯಕತೆ ಇದ್ದು, ಅದರ ಅಂದಾಜು **ಮೊತ್ತ: 4.80** ಲಕ್ಷ ಆಗುವುದರಿಂದ, ಸದರಿ ವಿಷಯವನ್ನು ದಿನಾಂಕ:30.05.2023ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

### ನಿರ್ಣಯ

ತುಂಗಾ ಮಹಿಳಾ ವಸತಿ ನಿಲಯದ ನೆಲ ಮಹಡಿಯಲ್ಲಿರುವ 05 ಕೊಠಡಿಗಳಿಗೆ ಅಲ್ಯೂಮಿನಿಯಂ ಪಾರ್ಟಿಷನ್ ನಿರ್ಮಿಸಲು (ಅಂದಾಜು ಮೊತ್ತ: ರೂ. 4.80 ಲಕ್ಷ) ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.07(d)(05/23) |

## –:ಟಿಪ್ಪಣಿ:–

**ವಿಷಯ: ಸುಸಜ್ಜಿತವಾದ ವೈಜ್ಞಾನಿಕ ಉಪಕರಣಗಳನ್ನು ಒಳಗೊಂಡ 02 ಸಂಖ್ಯೆ ವಿಜ್ಞಾನ ಪ್ರಯೋಗಾಲಯಗಳನ್ನು ನಿರ್ಮಾಣ ಮಾಡುವ ಕುರಿತು.**

*****

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ವಿಜ್ಞಾನ ಕಟ್ಟಡದಲ್ಲಿರುವ ಸ್ನಾತಕೋತ್ತರ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ಅಧ್ಯಯನ ವಿಭಾಗದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಪ್ರಾಯೋಗಿಕ ಕಲಿಕೆಗೆ ಅನುಕೂಲವಾಗಲು ಸುಸಜ್ಜಿತವಾದ ವೈಜ್ಞಾನಿಕ ಉಪಕರಣಗಳನ್ನು ಒಳಗೊಂಡ 02 ಸಂಖ್ಯೆಯ ವಿಜ್ಞಾನ ಪ್ರಯೋಗಾಲಯಗಳನ್ನು ನಿರ್ಮಾಣ ಮಾಡಲು **ಅಂದಾಜು ಮೊತ್ತ: 100 ಲಕ್ಷ** ಆಗುತ್ತದೆ ಹಾಗೂ ಇನ್ನುಳಿದ ವಿಜ್ಞಾನ ವಿಭಾಗಗಳಿಗೆ ಹಣಕಾಸಿನ ಲಭ್ಯತೆ ಮೇರೆಗೆ ಪ್ರಯೋಗಾಲಯಗಳನ್ನು ನಿರ್ಮಾಣ ಮಾಡುವ ಕುರಿತು ದಿನಾಂಕ:30.05.2023ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

### <u>ನಿರ್ಣಯ</u>

ವಿಜ್ಞಾನ ಕಟ್ಟಡದಲ್ಲಿರುವ ಸ್ನಾತಕೋತ್ತರ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸುಸಜ್ಜಿತವಾದ ವೈಜ್ಞಾನಿಕ ಉಪಕರಣಗಳನ್ನು ಒಳಗೊಂಡ 02 ಸಂಖ್ಯೆಯ ವಿಜ್ಞಾನ ಪ್ರಯೋಗಾಲಯಗಳನ್ನು ನಿರ್ಮಾಣ ಮಾಡಲು (ಅಂದಾಜು ಮೊತ್ತ ರೂ. 100 ಲಕ್ಷ) ಸಭೆಯು ಚರ್ಚಿಸಿ ಅನುಮೋದಿಸಿತು. ಹಾಗೂ ಇನ್ನುಳಿದ ವಿಜ್ಞಾನ ವಿಭಾಗಗಳಿಗೆ ಹಣಕಾಸು ಲಭ್ಯತೆಯ ಮೇರೆಗೆ ಪ್ರಯೋಗಾಲಯ ನಿರ್ಮಾಣ ಮಾಡುವಂತೆ ಸಭೆಯು ತೀರ್ಮಾನಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.07(e)(05/23) |

## –:ಟಿಪ್ಪಣಿ:–

**ವಿಷಯಃ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣಕ್ಕೆ 2'X2' 36W Surface mount LED Down Light ಗಳನ್ನು ಆಡಳಿತ ಭವನ, ಗ್ರಂಥಾಲಯ, ಬ್ಯಾಂಕ್ ಕಟ್ಟಡಗಳಿಗೆ ಖರೀದಿಸಿ ಅಳವಡಿಸುವ ಕುರಿತು.**

*****

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಆಡಳಿತ ಭವನ, ಜ್ಞಾನಸೌಧ ಕಟ್ಟಡದಲ್ಲಿರುವ ಗ್ರಂಥಾಲಯ ಹಾಗೂ ಬ್ಯಾಂಕ್ ಕಟ್ಟಡಗಳಲ್ಲಿ 2'X2'36W ಹಳೆಯದಾದ CFL Surface mount Light ಗಳು ಇದ್ದು ಅವುಗಳು ಹಾಳಾಗಿರುತ್ತದೆ. ಆದ್ದರಿಂದ, ಅವುಗಳನ್ನು ಬದಲಿಸಿ ಹೊಸದಾಗಿ 2'X2'36W LED Down Light ಗಳನ್ನು ಖರೀದಿಸಿ ಅಳವಡಿಸಲು ಅಂದಾಜು **ಮೊತ್ತ: ರೂ. 5.00** ಲಕ್ಷ ಆಗುವುದರಿಂದ, ಸದರಿ ವಿಷಯವನ್ನು ದಿನಾಂಕ:30.05.2023ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

## ನಿರ್ಣಯ

ವಿಶ್ವವಿದ್ಯಾನಿಲಯದ ಆಡಳಿತ ಭವನ, ಜ್ಞಾನಸೌಧ ಕಟ್ಟಡದಲ್ಲಿರುವ ಗ್ರಂಥಾಲಯ ಹಾಗೂ ಬ್ಯಾಂಕ್ ಕಟ್ಟಡಗಳಲ್ಲಿ 2'X2' 36W ಹಳೆಯದಾದ CFL Surface mount Light ಗಳನ್ನು ಬದಲಿಸಿ ಹೊಸದಾಗಿ 2'X2' 36W LED Down Light ಗಳನ್ನು ಖರೀದಿಸಲು ನಿಯಮಾನುಸಾರ ರೂ. 5.00 ಲಕ್ಷದ ಮಿತಿಯಲ್ಲಿದ್ದಲ್ಲಿ ಮ್ಯಾನುಯಲ್ ಟೆಂಡರ್ ಮೂಲಕ ದರಪಟ್ಟಿ ಕರೆದು ಖರೀದಿಸಿ ಅಳವಡಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಕುಲಸಚಿವರ ಆಪ್ತ ಕಾರ್ಯಾಲಯ | |
|---|---|
| ವಿಷಯ ಸಂಖ್ಯೆ: | ಸಿಂ.08(a)/(05/23) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಗೆ ಹಾಗೂ ವಿವಿಧ ವಿಭಾಗಗಳಿಗೆ 30 Godrej ಅಲ್ಮೆರಾ ಗಳನ್ನು ಖರೀದಿಸುವ ಬಗ್ಗೆ.**

*******

ನಮ್ಮ ವಿಶ್ವವಿದ್ಯಾನಿಲಯವು ಆಗಸ್ಟ್ 18 2009 ರಿಂದ ಪ್ರಾರಂಭಗೊಂಡಿರುತ್ತದೆ. ಸದರಿ ದಿನಾಂಕದಿಂದ ಆಡಳಿತ ಕಛೇರಿಗಳಲ್ಲಿ ನಿರ್ವಹಿಸಿದ ಹಾಗೂ ನಿರ್ವಹಿಸುತ್ತಿರುವ ಕಡತಗಳ ಸಂಖ್ಯೆ ಅಧಿಕವಾಗಿರುತ್ತದೆ. ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕಡತಗಳನ್ನು ಸಂಗ್ರಹಿಸಲು ರೆಕಾರ್ಡ್ ರೂಮ್ ಇಲ್ಲದೆ ಇರುವುದರಿಂದ, ಪ್ರಸ್ತುತ ನಿರ್ವಹಣೆ ಮಾಡುತ್ತಿರುವ ಕಡತಗಳನ್ನು ಇಡಲು ಅಲ್ಮೆರಾಗಳು ಇರುವುದಿಲ್ಲ. ಆದ್ದರಿಂದ, ಈಗಾಗಲೇ ನಿರ್ವಹಣೆಗೊಂಡ ಕಡತಗಳನ್ನು ಸಂಗ್ರಹಿಸಲು ಅಲ್ಮೆರಾಗಳ ಅವಶ್ಯಕತೆ ಇರುತ್ತದೆ. ತತ್ಸಂಬಂಧ ಆಡಳಿತ ಕಛೇರಿಗೆ ಹಾಗೂ ವಿವಿಧ ವಿಭಾಗಗಳಿಗೆ 30 Godrej ಅಲ್ಮೆರಾಗಳನ್ನು ಖರೀದಿಸುವ ಬಗ್ಗೆ ದಿನಾಂಕ:30.05.2023ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

<u>ನಿರ್ಣಯ</u>

ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಗಳಲ್ಲಿ ನಿರ್ವಹಿಸಿದ ಹಾಗೂ ನಿರ್ವಹಿಸುತ್ತಿರುವ ಕಡತಗಳ ಸಂಖ್ಯೆ ಅಧಿಕವಾಗಿರುವುದರಿಂದ ಹಾಗೂ ಈಗಾಗಲೇ ನಿರ್ವಹಣೆಗೊಂಡ ಕಡತಗಳನ್ನು ಸಂಗ್ರಹಿಸಿಡಲು ಆಡಳಿತ ಕಛೇರಿಗೆ 24, ರಾಜ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ 03 ಹಾಗೂ ರಸಾಯನಶಾಸ್ತ್ರ ಅಧ್ಯಯನ ವಿಭಾಗಕ್ಕೆ 03 **ಒಟ್ಟು 30 Godrej** ಅಲ್ಮೆರಾಗಳನ್ನು ನೇರವಾಗಿ ಕಂಪನಿಯಿಂದ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಪ್ರಾಧಿಕಾರಗಳು ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(d)(05/23) |

## –:ಟಿಪ್ಪಣಿ:–

**ವಿಷಯ: ಕು. ಗೀತಾ ಜಿ., ಮಾನ್ಯ ಸಿಂಡಿಕೇಟ್ ಸದಸ್ಯರು – ಇವರ ಪ್ರಸ್ತಾವನೆ.**

*****

ಕು. ಗೀತಾ ಜಿ., ಮಾನ್ಯ ಸಿಂಡಿಕೇಟ್ ಸದಸ್ಯರು ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ದಿನಾಂಕ:30.05.2023ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

| | |
|---|---|
| **ಪ್ರಸ್ತಾವನೆ–1** | Transfer of Shri D.H. Girish, Assistant Professor, Department of Economics from PG Center to Davangere due to his mother illness. Incase of P.G. Center has workload problem in that case guest faculties can be appointed to fulfill the workload. |
| ನಿರ್ಣಯ | ಶ್ರೀ. ಡಿ. ಹೆಚ್. ಗಿರೀಶ್ ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಸ್ನಾತಕೋತ್ತರ ಕೇಂದ್ರ, ಜಿ.ಆರ್.ಹಳ್ಳಿ, ಚಿತ್ರದುರ್ಗ – ಇವರು ವಾರದಲ್ಲಿ ಮೂರು ದಿನ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸಲು ವಿಭಾಗದ ಅಧ್ಯಕ್ಷರೊಂದಿಗೆ ಚರ್ಚಿಸಿ ಈ ಕುರಿತು ಮುಂದಿನ ಕ್ರಮಕೈಗೊಳ್ಳಲು ಸಭೆಯು ನಿರ್ಣಯಿಸಿತು. |
| **ಪ್ರಸ್ತಾವನೆ–2** | Total number of colleges who has submitted for new affiliation. |
| ನಿರ್ಣಯ | ನವೀನ ಸಂಯೋಜನೆಗಾಗಿ ಸಲ್ಲಿಸಿದ ಕಾಲೇಜುಗಳ ಸಂಖ್ಯೆ ಒಟ್ಟು 05. |
| **ಪ್ರಸ್ತಾವನೆ–3** | Details of the action taken by the University to the Government's letter regarding the promotion of Mr. Rangaswamy R.L. and also to compel consent to grant promotion on the basis of his merit. |
| ನಿರ್ಣಯ | ಶ್ರೀ ರಂಗಸ್ವಾಮಿ ಆರ್.ಎಲ್. ಅಧೀಕ್ಷಕರು ಇವರ ಬಡ್ತಿಗೆ ಸಂಬಂಧಿಸಿದಂತೆ, ಸದರಿಯವರಿಗೆ ಮಾತ್ರ ಅನ್ವಯವಾಗುವಂತೆ ಸಂಖ್ಯಾಧಿಕ ಹುದ್ದೆ (Supernumerary Post) ಸೃಜಿಸಿ, ಸರ್ಕಾರಕ್ಕೆ ಪತ್ರಿಸಿ ಅನುಮೋದನೆ ಪಡೆದ ನಂತರ ಕ್ರಮಕೈಗೊಳ್ಳಲು ಸಭೆಯು ನಿರ್ಣಯಿಸಿತು. |
| **ಪ್ರಸ್ತಾವನೆ–4** | Any new tenders are pending to notify. |
| ನಿರ್ಣಯ | ಯಾವುದೇ ಟೆಂಡರ್ ಪ್ರಕ್ರಿಯೆ ಬಾಕಿ ಇರುವುದಿಲ್ಲ. |
| **ಪ್ರಸ್ತಾವನೆ–5** | Regarding reducing the mess rent of P.G. Centre. Because the number of students is very less it is very difficult to run the mess. They are requesting to reduce the mess rent from Rs. 5,000/- to Rs. 2,000/- |
| ನಿರ್ಣಯ | ವಿದ್ಯಾರ್ಥಿಗಳ ಸಂಖ್ಯೆ ಪ್ರಸ್ತುತ ವರ್ಷದಲ್ಲಿ ಕನಿಷ್ಠ ಪ್ರಮಾಣದಲ್ಲಿರುವುದರಿಂದ ಮೆಸ್‌ದಾರರ ಮೆಸ್ ಬಾಡಿಗೆಯನ್ನು ರೂ. 4,000 ಕ್ಕೆ ನಿಗದಿ ಮಾಡಲು ಸಭೆಯು ನಿರ್ಣಯಿಸಿತು. |

ಕೊನೆಯಲ್ಲಿ ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು

ಕುಲಪತಿಗಳು